Mr. SPEAKER.—The Mysore Appropriation (No. 2) Bill, 1967, introduced.

I have to inform the House that I have received a message from the Governor, recommending that the Mysore Appropriation (No. 2) Bill, 1967, be introduced and considered in the Mysore Legislative Assembly.

MYSORE APPROPRIATION (No. 2) BILL, 1967

Motion to consider.

Sri RAMAKRISHNA HEGDE.—Sir, I beg to move :

"That the Mysore Appropriation (No. 2) Bill, 1967, be taken into consideration."

Mr. SPEAKER.—Motion moved :

"That the Mysore Appropriation (No. 2) Bill, 1967, be taken into consideration."

I have received a very long list of names, which I should not normally receive in the case of Appropriation Bills. I am mentioning to the House that half-an-hour for reply should be sufficient for any points that might be raised because normally on the Appropriation Bill, debate is not allowed; for the simple reason that what has already been approved cannot be disapproved today. But the formalities require that the passing of the Demands, is not by itself sufficient. One more step has to be taken and that step is being taken in the usual form. Therefore, the precedent and convention is that on Appropriation Bill debate is not allowed. I have a list of members who have had no chance to speak. I myself said once or twice that one or two small questions or points may be raised at the time of the Appropriation Bill. I am mentioning this for the purpose of making it clear that this cannot be a precedent for future. It is only to meet the situation that has arisen today that we are going through it.

Does Sri Gopal Gowda like to speak ?

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಭೆಯ ಮುಂದಿಟ್ಟಿರುವ ಮೈಸೂರು ರಾಜ್ಯದ ಹಣವಿನಿಯೋಗಕ್ಕೆ ಸಂಬಂಧಪಟ್ಟ (ಎರಡನೆಯ ಕ್ರಮಾಂಕದ) ವಿಧೇಯಕ 1967 ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಈ ಮುಂಚೆ ಆಯವ್ಯಯ ಮುಂಗಡ ಪತ್ರವನ್ನು ಮಾರ್ಚಿ ತಿಂಗಳಿನಲ್ಲಿ ಈ ಮಾನ್ಯ ಸಭೆಯ ಮುಂದೆ ಸರ್ಕಾರದವರು ಮಂಡಿಸಿದ್ದರು. ಆ ಕಾಲದಲ್ಲಿ ವೋಟ್ ಆನ್ ಅಕೌಂಟ್ ಹಣವನ್ನು ಪಡೆಯುವಾಗ ಎರಡು ದಿವಸಗಳು ಚರ್ಚೆಯಾಗಿದೆ ಎಂದು ನಾನು ತಿಳಿದೆ. ಆದಾದಮೇಲೆ ಸಾಮಾನ್ಯ ಚರ್ಚೆಯಾಗಿ ಈ ಆಯವ್ಯಯ ಪತ್ರದ ಮುಖ್ಯವಾದ ಬೇಡಿಕೆಗಳ ಮೇಲೆ ಕೂಲಂಕಷವಾಗಿ ಚರ್ಚೆಯಾಗಿದೆ. ಈ ಮಾನ್ಯ ಸಭೆಯ ಸದಸ್ಯರು, ಆಳುವ ಪಕ್ಷದವರು, ಮತ್ತು ವಿರೋಧ ಪಕ್ಷದವರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಎಲ್ಲರೂ ಕೂಡ ವಿಮರ್ಶಾತ್ಮಕವಾದ ದೃಷ್ಟಿಯಿಂದ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿದ್ದಾರೆ. ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ

(ಶ್ರೀ ಎಸ್. ಗೋಪಾಲ ಗೌಡ)

ಸಚಿವರು ಉತ್ತರಗಳನ್ನು ನೀಡಿದ್ದಾರೆ. ಈ ಮಸೂದೆಯ ಮೇಲೆ ಈಗಾಗಲೇ ಮಾನ್ಯ ಅಧ್ಯಕ್ಷರು ಸೂಚನೆ ಕೊಟ್ಟಿರುವಂತೆ ಒಂದು ವಿವರವಾದ ಚರ್ಚೆ ಆಗಬೇಕು ಎನ್ನುವುದು ನನ್ನ ಅಭಿಪ್ರಾಯ ಇಲ್ಲ. ಕಾನೂನು ದೃಷ್ಟಿಯಿಂದ ಒಂದು ಮಸೂದೆಯ ರೂಪದಲ್ಲಿ ಈ ಹಣಕಾಸಿನ ವಿನಿಯೋಗ ಮಾಡಬೇಕು ಎನ್ನುವಂತಹ ಸಂವಿಧಾನ ನಿರ್ದೇಶನ ಏನಿದೆ ಆ ಪ್ರಕಾರ ಈ ಮಸೂದೆಯನ್ನು ಮಾನ್ಯ ಸಚಿವರು ಮಂಡಿಸಿದ್ದಾರೆ. ಇಲ್ಲಿ ಕೆಲವು ವಿಷಯಗಳನ್ನು ಸರ್ಕಾರದವರು ಮನಗಾಣಬೇಕಾದ್ದು ಬಹಳ ಅವಶ್ಯಕ. ಈ ಕಾರಣದಿಂದ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಸರ್ಕಾರದ ಅಂಕೆ ಸಂಖ್ಯೆಗಳ ಪ್ರಕಾರ 1967-68 ನೇ ಹಣಕಾಸಿನ ವರ್ಷದ ಓಪನಿಂಗ್ ಬ್ಯಾಲೆನ್ಸ್ ಎಂದು ಏನು ಹೇಳುತ್ತೇವೆ, ಅದು ನಗದು ಹಣ 3.93 ಕೋಟಿ ಅಥವಾ 4 ಕೋಟಿ ರೂಪಾಯಿಗಳು ಎಂದು ಅರ್ಥವಾಗುತ್ತದೆ. ಈ ವರ್ಷ ಒಟ್ಟು 72.21 ಕೋಟಿ ರೂಪಾಯಿಗಳು 1967-68 ನೇ ಸಾಲಿನಲ್ಲಿ ಟ್ರೆಜರಿಯಿಂದ ಹೊರಗಡೆ ಹೋಗತಕ್ಕಂಥ ಹಣ. 68 71 ಕೋಟಿ ರೂಪಾಯಿಗಳು ಟ್ರೆಜರಿಗೆ ಬರತಕ್ಕಂಥಹಣ. ಇದರಲ್ಲಿ ಈಗಿರತಕ್ಕ ಖೋತಾ ಸೇರಿಕೊಂಡು ಕೊನೆಗೆ 7.43 ಕೋಟಿ ರೂಪಾಯಿಗಳು ಓಪನಿಂಗ್ ಬ್ಯಾಲೆನ್ಸಿನಲ್ಲಿ ಖೋತಾ ಇರುತ್ತದೆ ಎನ್ನುವ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. 3.50 ಲಕ್ಷ ಅಥವಾ 4 ಕೋಟಿ ರೂಪಾಯಿಗಳನ್ನು ಪಾನನಿರೋಧ ಸಡಲಿಕೆ ಮಾಡುವುದರಿಂದ ನಾವು ಪಡೆಯಬಹುದಾಗಿದೆ ಎಂಬ ಸೂಚನೆ ಇದೆ. ಈಗ ನಾವು ಸರ್ಕಾರಕ್ಕೆ 67-68 ನೇ ಸಾಲಿನಲ್ಲಿ ವಿನಿಯೋಗ ಮಾಡುವುದಕ್ಕೆ 395,52,37,000 ರೂಪಾಯಿಗಳನ್ನು ಈ ಮಸೂದೆಯ ಮೂಲಕ ಸರ್ಕಾರಕ್ಕೆ ಕೊಡತಕ್ಕವರಾಗಿದ್ದೇವೆ. ಸ್ವಾಮಿ, ಮಾನ್ಯ ಕೊರಾವಳೆಯವರು ಭಾಷಣ ಮಾಡುತ್ತಾ ಹೇಳಿದರು ಬ್ಯಾಲೆನ್ಸ್ಡ್ ಬಡ್ಜೆಟ್ಟು ನಮ್ಮದಾಗಿದೆ, ಚಿಂತೆ ಇಲ್ಲ ಎಂದು ಹೇಳಿದರು. ಸಾಮಾನ್ಯವಾಗಿ ಆದಾಯಕ್ಕಿಂತ ವೆಚ್ಚ ಕಡಿಮೆಯಾಗಿದ್ದರೆ, ಅಥವಾ ಹೆಚ್ಚು ಕಡಿಮೆ ಆದಾಯ ವೆಚ್ಚ ಸರಾಸರಿ ಆದರೆ ಅದನ್ನು ಒಂದು ಯೋಗ್ಯವಾದ ಬ್ಯಾಲೆನ್ಸ್ಡ್ ಬಡ್ಜೆಟ್, ಸಮತೂಕವಾಗಿರತಕ್ಕ ಆಯವ್ಯಯ ಎಂದು ಕರೆಯುತ್ತಾರೆ. ಇದರಿಂದ ಮುಂದೆ ಹೋಗಿ ಹೇಳುವರೆ ಆಸ್ತಿಪಾಸ್ತಿಗಳನ್ನು ಗಮನಕ್ಕೆ ತೆಗೆದುಕೊಂಡು ನಮ್ಮ ಅಸೆಟ್ಸ್ ಅಂಡ್ ಲಯಬಿಲಿಟೀಸ್ ತೆಗೆದುಕೊಂಡು ನೋಡಬೇಕು. ಅನೇಕ ಬಂಡವಾಳಗಳನ್ನು ತೊಡಗಿಸಿ, ರಾಜ್ಯದ ಆಸ್ತಿಗಳು ಹೆಚ್ಚು ಇದ್ದ ಪಕ್ಷದಲ್ಲಿ ಸಾಲಗಳು ಅಥವಾ ಖೋತ ಆಯವ್ಯಯಕ್ಕೆ ನಾವು ಹೋಗುವುದರಲ್ಲಿ ತಪ್ಪು ಇಲ್ಲ ಎಂದು ಹೇಳಿದರು. ಅದನ್ನ ನಾನು ಪರಿಶೀಲನೆ ಮಾಡಿದೆ. ಸ್ವಾತಂತ್ರ್ಯಪೂರ್ವದಿಂದ ಹಿಡಿದು 25 ವರ್ಷಗಳ ಆಯವ್ಯಯವನ್ನು ಪರಿಶೀಲನೆ ಮಾಡಿದೆ. ಪರಿಸ್ಥಿತಿ ಏನಿದೆ ಎಂದರೆ ಸಣ್ಣ ರಾಜ್ಯ ಇದ್ದದ್ದು 1956-57 ರಲ್ಲಿ ವಿಸ್ತಾರ ಆಯಿತು. ಮುಂಬೈ ಮತ್ತು ಹೈದರಾಬಾದ್ ಪ್ರದೇಶಗಳು ನಮಗೆ ಬಂದವು. ಕೊಡಗು ಮತ್ತು ಮದ್ರಾಸಿನ ಕೆಲವು ಪ್ರದೇಶಗಳು ನಮಗೆ ಬಂದವು. ಅದನ್ನು ಗಮನದಲ್ಲಿಟ್ಟುಕೊಂಡು ನಡೆದಿರುವ 20 ವರ್ಷಗಳಲ್ಲಿ ಸ್ವಾತಂತ್ರ್ಯ ನಂತರ ಸರ್ಕಾರ ಏನು ಹಣಕಾಸಿನ ವ್ಯವಹಾರಗಳನ್ನ ನಡೆಸಿದೆ, ಅದರ ಪರಿಣಾಮದಿಂದ 1, 2, 3 ಯೋಜನೆಗಳ ಪರಿಣಾಮದಿಂದ ಇವೊತ್ತು ನಮ್ಮ ಆರ್ಥಿಕ ಸ್ಥಿತಿ ನಿಜವಾಗಿಯೂ ಚೆನ್ನಾಗಿಲ್ಲ. 1936-37 ರಿಂದ 1946-47 ರವರೆಗೆ ನಮ್ಮ ಸಣ್ಣ ರಾಜ್ಯದಲ್ಲಿ 6 ಕೋಟಿ 28 ಲಕ್ಷ ಚಿಲ್ಲರೆ ರೂಪಾಯಿಗಳು ಸ್ಪೆಷಲ್ ರಿಜರ್ವ್ ಫಂಡ್ ಕೂಡ ಇತ್ತು. ನಾವು ಅದನ್ನು ನೋಡಿದ್ದೇವೆ. ಇವೊತ್ತು ಒಟ್ಟು ಅಸೆಟ್ಸ್ ಅಂಡ್ ಲಿಯಬಿಲಿಟೀಸ್ 31-3-1961ರ ನಂತರ ಹಣಕಾಸಿನ ವರ್ಷದ ಆಖೈರಿನಲ್ಲಿ ಅಸೆಟ್ಸ್ 44 ಕೋಟಿ 64 ಲಕ್ಷ ರೂಪಾಯಿಗಳು ಎಂದು ಇಟ್ಟುಕೊಂಡರೆ ಇದರಲ್ಲಿ ಲಯಬಿಲಿಟೀಸ್ ನೋಡಿದರೆ ಸುಮಾರು 86 ಕೋಟಿ 42 ಲಕ್ಷ ಇದೆ. ನಾವು ಕೊಡತಕ್ಕಂಥಾದ್ದು ಆಸ್ತಿಗಿಂತ 86 ಕೋಟಿ ಹೆಚ್ಚಿಗೆ ಇತ್ತು. ಇವತ್ತಿನ ಪರಿಸ್ಥಿತಿ ಹೇಳುತ್ತೇನೆ. ಇನ್ನು ನಮ್ಮ ಸಾಲಗಳು. ಇದರಲ್ಲಿ ಎಷ್ಟು ಸಾಲಗಳು ಹೆಚ್ಚಾಗಿವೆ, ಈ ವರ್ಷಕ್ಕೆ ಟೋಟಲ್ ಅಸೆಟ್ಸ್ 68.71 ಕೋಟಿ ಇದರಲ್ಲಿ 33.77 ಕೇಂದ್ರದಿಂದ ಸಾಲ ಪಡೆಯತಕ್ಕಂಥಾದ್ದು ಇದೆ. ಇತರ ಸಾಲಗಳು 3 16. ಡಿಪಾಜಿಟ್ಸ್ ಮತ್ತು ಅಡ್ವಾನ್ಸಸ್ 15.16. ಒಟ್ಟು ರೆವೆನ್ಯೂ ಸರ್ಪ್ಲಸ್ 8.59. ನಿಮಗೆ ಸಮಾಧಾನವಿದ್ದರೆ ನಮಗೂ ಸಮಾಧಾನ. ನೀವು ವ್ಯವಹಾರ ನಡೆಸುತ್ತಿದ್ದೀರಿ. ರಿಜರ್ವ್ ಬ್ಯಾಂಕ್ ಓವರ್ ಡ್ರಾಫ್ಟ್ ಮತ್ತು ಕೇಂದ್ರದಿಂದ ಸಾಲ ತೋರಿಸಿಕೊಂಡು ಲೆಕ್ಕ ಸರಿದೂಗಿಸುವುದು ಸಂತೋಷವಾಗಬಹುದೇ ಎಂದು ಕೇಳುತ್ತೇನೆ. ಇದರಲ್ಲಿ ಒಟ್ಟು ಕೊಡುವಂಥಾದ್ದು 95.20 ಕೋಟಿಯಲ್ಲಿ ಇದರಲ್ಲಿ 32 ಕೋಟಿ ಬಂಡವಾಳ ವಜಾ ಮಾಡಿದರೆ 52.55 ಕೋಟಿ ಸಾಲ ತೀರಿಸುವುದು ಇದೆ. 10.16 ಕೋಟಿ ಲೋನ್ ಅಡ್ವಾನ್ಸಸ್ ಇದೆ. ಒಟ್ಟು 95.20 ಕೋಟಿ ಬರುತ್ತದೆ. ಇದನ್ನು ನೋಡಿ ನನಗೆ ತುಂಬಾ ಕಳವಳವಾಗುತ್ತದೆ. ಯಾವ ರೀತಿ ನಿಮ್ಮ ಹಣಕಾಸಿನ ವ್ಯವಸ್ಥೆ ಇವತ್ತು ನಡೆದಿದೆ? ಸ್ವಾಮಿ, ಕೇಂದ್ರ ಹಾಗೂ ರಾಜ್ಯಗಳು ಪರಸ್ಪರ ಒಂದಕ್ಕೊಂದು ಅವಲಂಬಿಸಿವೆ. ನಮ್ಮ ರಾಜ್ಯದ ಹಣದ ಆಡಳಿತದಲ್ಲಿ ಏರುಪೇರು ಆಗಿದ್ದರೆ

ಕೊರತೆ ಇದ್ದರೆ ಕೇಂದ್ರದಿಂದ ಅನುಕೂಲ ಪಡೆಯಬಹುದು. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ನಿಜಲಿಂಗಪ್ಪನವರು ಹೇಳುವ ಪ್ರಕಾರ ಕೇಂದ್ರದಿಂದ ಕೇಳುತ್ತೇವೆ. ದುರದೃಷ್ಟವಶಾತ್ ನಮ್ಮ ಆದಾಯದ ಮೇಲೆ ರೂಢಿಸಿಕೊಳ್ಳಲಾರದಂತ ಆಡಳಿತ ಕಳೆದ 20 ವರ್ಷ ನಡೆದ ಮೂಲಕ ಮೇಲಿಂದ ಮೇಲೆ ಇಂಥ ಪರಿಸ್ಥಿತಿ ಬಂದಿರುವುದರಿಂದ ನಾವು ಮತ್ತಷ್ಟು ಪರಾವಲಂಬಿಗಳಾಗಿದ್ದೇವೆ. ಕೇಂದ್ರದವರು ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ, ಇದು ನಮ್ಮ ಸ್ಥಿತಿ. ಅದು ಸಣ್ಣ ನೀರಾವರಿ ಯೋಜನೆ ಆಗಬಹುದು, ಕೃಷ್ಣಾ ನದಿ ಯೋಜನೆ ಆಗಬಹುದು, ಕಾಳಿ ನದಿ ಯೋಜನೆ ಆಗಬಹುದು, ಅವರ ಕನಸಿನಲ್ಲಿರುವ ಸಣ್ಣ ಕಾರಿನ ಯೋಜನೆ ಆಗಬಹುದು, ಸ್ಟೀಲ್ ಪ್ರೊಜೆಕ್ಟ್ ಆಗಬಹುದು, ಇದು ವಾಸ್ತವ ಸ್ಥಿತಿ. ಗಜೇಂದ್ರಗಡಕರ ಸಮಿತಿಯ ಸಲಹೆಗಳನ್ನು ಕಾರ್ಯಗತ ಮಾಡುವ ಸನ್ನಿವೇಶ ಕೇಂದ್ರ ಸರಕಾರಕ್ಕೆ ಬಂದರೆ, ನಮ್ಮ ನಾನ್ ಗೆಜೆಟೆಡ್ ನೌಕರರ ಸಂಬಳ ಸಾರಿಗೆ ಬಗ್ಗೆ ಪರಿಶೀಲಿಸುತ್ತಾ ಕುಳಿತಿರತಕ್ಕ ಒಂದು ಸಮಿತಿ ಇದೆ, ಅದು ಅದೇ ರೀತಿಯ ದಾರಿಯಲ್ಲಿ ವರದಿ ಕೊಟ್ಟು ನ್ಯಾಯವಾದ ಸಂಬಳ ಸಾರಿಗೆ ಸರಕಾರದ ಎರಡು ಲಕ್ಷ ನೌಕರರಿಗೆ ಕೊಡುವ ಪರಿಸ್ಥಿತಿ ಬಂದರೆ, ನಮ್ಮ ಡೆವಲಪ್‌ಮೆಂಟ್ಸ್ ಸ್ಕೀಮ್ಸ್ ಅಭಿವೃದ್ಧಿ ಕೆಲಸ ನಿಲ್ಲಿಸಿದರೆ ನಿವ್ವಳ ಆದಾಯ 65 ಕೋಟಿ ಸಂಬಳಕ್ಕೆ ಸರಿಹೋಗುತ್ತದೆ. ಇಂಥ ಪರಿಸ್ಥಿತಿ ಇದೆ. ನನ್ನ ಹತ್ತಿರ ಇದಕ್ಕೆ ಒಂದು ಪರಿಹಾರ ಇದೆ. ಇದು ರಾಜಕೀಯ ಪರಿಹಾರ. ಶ್ರೀಮಾನ್ ನಿಜಲಿಂಗಪ್ಪನವರು ಅವರ ಸಹೋದ್ಯೋಗಿಗಳು ಈ ಅಸಮರ್ಥತೆಯನ್ನು ಮನಗಂಡು ರಾಜ್ಯ ಸೂತ್ರ ಬೇರೆಯವರಿಗೆ ವಹಿಸಿ ಕೊಡಬೇಕು. ಅವರ ಅಸಮರ್ಥತೆ ಸಾಬೀತಾಗಿದೆ, ಸ್ಪಷ್ಟವಾಗಿದೆ. ಈ ಪರಿಹಾರವನ್ನು ಶ್ರೀಮಾನ್ ಕೋಠಾವಳೆಯವರೂ ವಿಚಾರ ಮಾಡಬೇಕು. ಶ್ರೀಮಾನ್ ನಿಜಲಿಂಗಪ್ಪನವರು ಕೃಷಿ ಇಲಾಖೆಯಂಥ ದೊಡ್ಡ ಪೋರ್ಟ್‌ಫೋಲಿಯೋ ಇಟ್ಟುಕೊಂಡು ರಾಜಕೀಯ ಓಡಾಟಕ್ಕೆ ಮೇಲ್ವಿಚಾರಣೆಗೆ ಬಳಸ ಬೇಕಾದ ಕಾಲವನ್ನು ಇದಕ್ಕೆ ವಿನಿಯೋಗಿಸಲು ಕಷ್ಟವಾಗಿದೆ. ಇದು ಅವರಿಗೆ ಸಂಬಂಧಪಟ್ಟ ವಿಷಯ ಅದಕ್ಕೆ ಹೆಚ್ಚಾಗಿ ನಾನು ಗಮನ ಕೊಡುವುದಿಲ್ಲ.

ಇಷ್ಟು ಹೇಳಿದ ಮೇಲೆ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ಪುನಃ ತರಬೇಕಾಗಿದೆ. ನಮ್ಮಲ್ಲಿ ಕೈಗಾರಿಕೆಗಳನ್ನು ಮಾಡಬೇಕು ಎಂದು ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ್ದಾರೆ. ನಮ್ಮ ರಾಜ್ಯಕ್ಕೆ ಕೈಗಾರಿಕೋದ್ಯಮಿಗಳು ಬರಬೇಕು, ನಮ್ಮಲ್ಲಿ ಅಪಾರ ಪ್ರಕೃತಿ ಸಂಪತ್ತು ಇದೆ, ಭೂಮಿ ಕೊಡುತ್ತೇವೆ, ನೀರು ಕೊಡುತ್ತೇವೆ, ವಿದ್ಯುತ್ ಶಕ್ತಿ ಕೊಡುತ್ತೇವೆ, ಬನ್ನಿ ಬನ್ನಿ ಎಂದು ಹೇಳುತ್ತಾ ಮುಂಬಯಿ, ಕಲಕತ್ತ, ದಿಲ್ಲಿ ಎಲ್ಲಾ ಕಡೆ ಭಾರಿ ಉದ್ದಿಮೆದಾರರನ್ನು, ವಿದೇಶಿ ಉದ್ದಿಮೆದಾರರನ್ನು ಆಹ್ವಾನಿಸಿ ಆಮಂತ್ರಣವನ್ನು ಮೇಲಿಂದ ಮೇಲೆ ನೀಡುತ್ತಿದ್ದಾರೆ. ಇದು ಬಹಿರಂಗವಾಗಿಯೂ ಕೆಲವು ವೇಳೆ ಗುಟ್ಟಾಗಿಯೂ ಇದೆ. ಬಹಳ ಸಂತೋಷ. ನಮ್ಮ ರಾಜ್ಯ ಕೈಗಾರಿಕೆ ರಾಜ್ಯವಾಗಬೇಕು, ಇರತಕ್ಕ ಪ್ರಕೃತಿ ಸಂಪತ್ತನ್ನು ರೂಢಿಸುವಲ್ಲಿ ಮುಂದುವರಿಯ ಬೇಕು, ಎನ್ನುವುದಕ್ಕೆ ಯಾರ ಭಿನ್ನಾಭಿಪ್ರಾಯವಿಲ್ಲ. ಆದರೆ ಶ್ರೀಮಾನ್ ನಿಜಲಿಂಗಪ್ಪನವರು ಅವರ ಸಹೋದ್ಯೋಗಿಗಳು ಹಾಕಿರುವ ಹಾಕುತ್ತಿರುವ ದಾರಿ ನೋಡಿದರೆ ಭಾರಿ ಕಳವಳ ಉಂಟಾಗು ತ್ತದೆ. ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಬೇರೆ ಶೋಷಕ ಶಕ್ತಿಗಳಿಗೆ ಶಾಶ್ವತವಾಗಿ ಧಾರೆ ಯೆರೆಯುವ, ನಮ್ಮ ಹಿತಾಸಕ್ತಿಗಳನ್ನು ಮಾರಿಬಿಡುವ ದಾಹ ಇದರ ಹಿನ್ನೆಲೆಯಲ್ಲಿ ಕಂಡುಬರುತ್ತದೆ ಎಂದು ನನಗೆ ಅನಿಸುತ್ತದೆ. ಅದನ್ನು ತಾವು ವಿಚಾರ ಮಾಡಿ. ಇದು ರಾಷ್ಟ್ರೀಯತೆಯ ಪ್ರಶ್ನೆ ಇರುವುದರಿಂದ ನಾನು ಹೆಚ್ಚಿಗೆ ಹೇಳುವುದಿಲ್ಲ. ಕೈಗಾರಿಕೆ ರಾಜ್ಯದಲ್ಲಿ ಆಗಬೇಕು. ಬಂಡವಾಳ ಯಾರು ಕೊಟ್ಟರೂ, ಯಂತ್ರ ಯಾರು ಕೊಟ್ಟರೂ, ಟೆಕ್ನಾಲಜಿ ಯಾರು ಕೊಟ್ಟರೂ ಅದನ್ನು ಪಡೆದು ಕೈಗಾರಿಕೆ ಅಭಿವೃದ್ಧಿ ಪಡಿಸಬೇಕು ಎಂಬುದಕ್ಕೆ ನನಗೆ ಭಿನ್ನಾಭಿಪ್ರಾಯವಿಲ್ಲ. ಕೈಗಾರಿಕೆಯಲ್ಲಿ ತೊಡಗಿಸಿರುವ ಹಣದಿಂದ ಮೂರು ಕಾರ್ಪೋರೇಷನ್‌ಗಳಿವೆ, ಅವು ಹೌಸಿಂಗ್, ಫೈನಾನ್ಸ್, ರೋಡ್ ಟ್ರಾನ್ಸ್‌ಪೋರ್ಟ್. ಇದರಲ್ಲಿ 1,89,46,500 ರೂಪಾಯಿಗಳನ್ನು ತೊಡಗಿಸಿದ್ದಾರೆ. ಸರ್ಕಾರಿ ಕಂಪೆನಿಗಳು ಸುಮಾರು 13 ಇವೆ. ಅವುಗಳಲ್ಲಿ 6,99,64,464 ರೂಪಾಯಿಗಳನ್ನು ತೊಡಗಿಸಿದ್ದೇವೆ. ಜಾಯಿಂಟ್ ಸ್ಟಾಕ್ ಕಂಪೆನಿಗಳಿವೆ. ಅವುಗಳಲ್ಲಿ ಸುಮಾರು ಒಂದು ಕೋಟಿ 73 ಲಕ್ಷ ರೂಪಾಯಿಗಳನ್ನು ತೊಡಗಿಸಿದ್ದೇವೆ. ಒಟ್ಟು 10 ಕೋಟಿ 63 ಲಕ್ಷ ರೂಪಾಯಿಗಳು ಎಂದು ಇಟ್ಟುಕೊಳ್ಳಬಹುದು. ಡಿವಿಡೆಂಡ್, ಉತ್ಪತ್ತಿ, ಆದಾಯ ನಮಗೆ ಬಂದಿರುವುದು 12,99,673 ರೂಪಾಯಿ. ಈ ವರ್ಷದಲ್ಲಿ ಡಿವಿಡೆಂಡ್ ಬಂದಿಲ್ಲವೆಂದು ಹೇಳುತ್ತಾರೆ. ಹೋದ ವರ್ಷದ ಲೆಕ್ಕ ನಾನು ಗಮನಕ್ಕೆ ತೆಗೆದುಕೊಂಡಿದ್ದೇನೆ.

3-00 P.M.

ಒಂದು ಅಂಶವನ್ನು ತಾವು ಇಲ್ಲಿ ಗಮನಿಸಬೇಕು. ಬಾಗಲಕೋಟೆ ಸಿಮೆಂಟ್ ಕಾರ್ಖಾನೆಗೆ 9,89,000 ರೂಪಾಯಿಗಳನ್ನು ಷೇರುಗಳಿಗಾಗಿ ಕೊಟ್ಟಿದ್ದಾರೆ. ಅದರಲ್ಲಿ ಒಂದು ಲಕ್ಷ ರೂಪಾಯಿ

(ಶ್ರೀ ಎಸ್. ಗೋಪಾಲಗೌಡ)

ಡಿವಿಡೆಂಡ್ ಎಂದು ಕೊಟ್ಟಿದ್ದಾರೆ. ಹಿಂದೆ ಗೋಪಾಲರಾಯರ ಬ್ಯಾಂಕ್ ಇತ್ತು. ನಾವು ಹಣ ಕೊಡುವಾಗಲೇ ಅದರ ಮೇಲಿನ ಬಡ್ಡಿಯನ್ನು ನಮಗೆ ಕೊಡುತ್ತಿದ್ದರು. ಅದು ಚೆನ್ನಾಗಿ ನಡೆಯುತ್ತಿತ್ತು. ಆ ತರಹದಲ್ಲಿ ಇದು ಬಂದಿರಬಹುದು. ನಾನು ಗುರುತರವಾದ ಅಪಾದನೆ ಮಾಡಿದೆ, ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿ ವ್ಯವಹಾರದಲ್ಲಿ ಏನೊಂದು ಅಪಾದನೆ ಬಂದಿದೆ ಅದನ್ನು ವಿಚಾರಣೆ ಮಾಡುವುದಕ್ಕೆ ಬರೀ ದುಡ್ಡು ಖರ್ಚು ಮಾಡಿ ಪೋಲೀಸ್ ಇಲಾಖೆಯ ಸಿಬ್ಬಂದಿಯನ್ನು ನೇಮಕ ಮಾಡಿ ಎಲ್ಲ ಅವರಮೇಲೆ ಕೇಸು ಹಾಕಿದ ಮೇಲೆ ನೀವು ಹಸ್ತಕ್ಷೇಪ ಮಾಡಿ ಸೆಷನ್ಸ್ ಕೋರ್ಟಿನಿಂದ ಕೇಸನ್ನು ವಾಪಸು ತೆಗೆಸುವುದಕ್ಕೆ ಹೋದಿರಲ್ಲ ಅದು ಸರಿಯೇ? ನನಗೆ ತಿಳಿದು ಬಂದಿರುವಂತೆ 10 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದ ಮನುಷ್ಯ ಪುನಃ ಡೈರೆಕ್ಟರಾಗಿದ್ದಾನೆ, ಪುನಃ ತಳ ಭದ್ರವಾಗಿ ಊರಿದ್ದಾನೆ.

ಮಲಬಾರ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್‌ಗೆ 20 ಲಕ್ಷ ರೂಪಾಯಿ, ಮೈಸೂರು ಸಿಮೆಂಟ್ಸ್, ಅಮ್ಮಸಂದ್ರ ಸಿಮೆಂಟ್ಸ್, ಬಿರ್ಲಾ ಅವರು ಕೊಂಡುಕೊಂಡದ್ದಕ್ಕೆ 23,46,000 ರೂಪಾಯಿ, ತಾತಾ ಅವರಿಗೆ ನಮ್ಮ ರಾಜ್ಯದಲ್ಲಿ 42ನೆ ಐಟಂನಲ್ಲಿ 61,200 ರೂಪಾಯಿ, 45ನೆ ಐಟಂ 2,82,140 ರೂಪಾಯಿ, 49ನೆ ಐಟಂ 8,97,000 ರೂಪಾಯಿ, 51ನೆ ಐಟಂ 2,98,325 ರೂಪಾಯಿ, 59ನೆ ಐಟಂ 1,63,000 ಹೀಗೆ 17 ಲಕ್ಷ ಚಿಲ್ಲರೆ ರೂಪಾಯಿಗಳನ್ನು ತಾತಾರವರು ತೆರೆದಿರುವ ನಾನಾ ಹೆಸರಿನ ಕಂಪನಿಗಳಿಗೆ ಸರ್ಕಾರದಿಂದ ಹಣ ಪಾವತಿಯಾಗಿದೆ. ಇದು ಕೈಗಾರಿಕೆಯಲ್ಲಿ ಹಣ ತೊಡಗಿಸಿರತಕ್ಕ ಒಂದು ರೀತಿ.

ಇನ್ನು ಕೈಗಾರಿಕೆಗಳಿಗೆ ಗ್ಯಾರಂಟಿ ಕೊಟ್ಟಿರತಕ್ಕದೂ ಇದೆ. ಎಷ್ಟೋ ಲಕ್ಷ ರೂಪಾಯಿಗಳನ್ನು ಗ್ಯಾರಂಟಿ ಕೊಟ್ಟಿದ್ದೇವೆ. ಬಹುಶಃ 175 ಲಕ್ಷ ರೂಪಾಯಿಗಳನ್ನು ಗುಲ್ಬರ್ಗ ಹತ್ತಿ ಗಿರಣಿಗೆ ಹಾಕಿದ್ದು ಮೊನ್ನೆ ಮಾನ್ಯ ಮುಖ್ಯ ಸಚಿವರು ಹೇಳಿದರು, ಅನೇಕ ವರ್ಷಗಳ ಕಾಲ ನಾವು ಅದನ್ನು ನಡೆಸಿದೆವು, ಎರಡು ಮೂರು ಸಾವಿರ ಜನರಿಗೆ ಕೆಲಸ ಕೊಟ್ಟಿದ್ದೆವು, ಇನ್ನು ಮುಂದೆ ಅದನ್ನು ನಡೆಸುವುದಕ್ಕೆ ಶಕ್ಯವಿಲ್ಲ, ಪ್ರತಿ ತಿಂಗಳೂ ಎರಡು ಲಕ್ಷ ರೂಪಾಯಿನಷ್ಟು ಲುಕ್ಸಾನಾಗುತ್ತಿದೆ, ಆದ್ದರಿಂದ ನಾವು ಮುಚ್ಚಿದ್ದೇವೆ, ಬಹುಶಃ ಆ ಕಾರ್ಖಾನೆಯನ್ನು ತೆರೆಯುವ ಸಂಭವವಿಲ್ಲ ಎಂದು ಹೇಳಿದರು. ಹುಬ್ಬಳ್ಳಿಯಲ್ಲಿ ಒಂದು ಸಹಕಾರ ಸಂಸ್ಥೆಗೆ ಹಣವನ್ನು ಕೊಟ್ಟಿದ್ದಾರೆ, ಇನ್ನೂ ಅನೇಕ ಸಂಸ್ಥೆಗಳಿಗೆ ಹಣ ಕೊಟ್ಟಿದ್ದಾರೆ. ಈ ಹಣ ಕೊಡುವಾಗ, ಸರ್ಕಾರದವರು ಗ್ಯಾರಂಟಿ ಕೊಡುವಾಗ, ಒಂದು ಮಸೂದೆಯನ್ನು ಮಾಡಿ ಇಷ್ಟಿಷ್ಟು ಹಣವನ್ನು ಈ ರೀತಿಯಾಗಿ ಕೊಡಬೇಕು, ಇದಕ್ಕಿಂತ ಹೆಚ್ಚಿಗೆ ಗ್ಯಾರಂಟಿ ಕೊಡತಕ್ಕದಲ್ಲ ಎನ್ನುವ ಮಸೂದೆಯನ್ನು ಮಾಡಿದರೆ ಮತ್ತು ಗ್ಯಾರಂಟಿ ಕೊಟ್ಟ ಹಣವನ್ನು ಸಹ ಅವರು ಆಗಾಗ್ಗೆ ಮಸೂದೆ ರೂಪದಲ್ಲಿ ಸಭೆಯ ಮುಂದೆ ಮಂಡಿಸಿದರೆ, ಅದರ ಮೇಲೆ ನಾವು ಎಷ್ಟು ಹಣ ಕೊಡಬೇಕಾಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಯಾವುದಾದರೂ ಒಂದು ಕಂಪೆನಿಗೆ ಗ್ಯಾರಂಟಿ ಕೊಟ್ಟಿದ್ದರೆ, ಅದು ಸಾಲ ತೆಗೆದುಕೊಂಡಿದ್ದರೆ ಆ ಕಂಪೆನಿ ಏನಾದರೂ ಲಿಕ್ವಿಡೇಟ್ ಆದರೆ, ಪಾಪರ್ ಆದರೆ, ಆಗ ಗ್ಯಾರಂಟಿ ಕೊಟ್ಟಿರುವ ಮೊಬಲಗನ್ನು ನಮ್ಮ ಸರ್ಕಾರ ಸಲ್ಲಿಸಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ನಮ್ಮ ಶಕ್ತಿಯ ಇತಿಮಿತಿಗಳನ್ನು ಅರ್ಥ ಮಾಡಿಕೊಂಡು ನಾವು ಗ್ಯಾರಂಟಿ ಕೊಡಬೇಕಾಗುತ್ತದೆ ಇವತ್ತು ಅಂಥ ಕೆಲವು ನಿದರ್ಶನಗಳಿವೆ.

ಇನ್ನು ಮುಖ್ಯವಾಗಿ ಅಪೆಕ್ಸ್ ಬ್ಯಾಂಕ್ ಹಾಗೂ ಭೂ ಅಭಿವೃದ್ಧಿ ಬ್ಯಾಂಕ್ ಎಂದು ಏನಿದೆ ಇದಕ್ಕೆ ರಾಜ್ಯ ಸರ್ಕಾರದವರು ಅಪಾರವಾದ ಹಣವನ್ನು ಕೊಟ್ಟಿದ್ದಾರೆ. ಇವುಗಳ ವ್ಯವಹಾರಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಈ ಸಂದರ್ಭದಲ್ಲಿ ನಾನು ಬಹಳ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ಒಂದು ಅಂಶವನ್ನು ನಾವು ಕೈಗಾರಿಕೆಗಳಲ್ಲಿ ನೋಡುತ್ತೇವೆ.

ಎರಡನೇ ಅಂಶವೇನೆಂದರೆ, ಕೈಗಾರಿಕೆಗಳನ್ನು ಮುಚ್ಚುವುದು. ರಾಜಾ ಮಿಲ್ ಮತ್ತು ಮಿನರ್ವ ಮಿಲ್‌ಗಳು ಮುಚ್ಚಿದ್ದು ಸ್ವಲ್ಪ ತೆರೆದವು, ಕೆಲವು ಮಿಲ್‌ಗಳನ್ನು ಬೇರೆಯವರಿಗೆ ಕೊಡುವುದು—ಮೈಸೂರಿನ ಟೆಕ್ಸ್‌ಟೈಲ್ ಮಿಲ್ಲನ್ನು ಕಲ್ಕತ್ತದ ಯಾರೋ ಒಬ್ಬ ಕೈಗಾರಿಕೋದ್ಯಮಿ ಕೊಂಡುಕೊಂಡಿದ್ದಾನೆ, ಚಿತ್ರದುರ್ಗದ ಮಿಲ್ಲನ್ನು ಕೊಯಮತ್ತೂರಿನವರಿಗೆ ಕೊಟ್ಟರು. ಬಹಳ ಧಾರಾಳವಾಗಿ ನಾವು ಎಲ್ಲರಿಗೂ ಹಣ ಕೊಡುತ್ತೇವೆ. ಭದ್ರಾವತಿ ಬಹಳ ದೊಡ್ಡದಾಗಿ ವಿಸ್ತಾರವಾಗುತ್ತದೆ ಎಂದು ಹೇಳಿದ್ದಾರೆ, ಕಾದು ನೋಡೋಣ ಹೇಗೆ ವಿಸ್ತಾರವಾಗುತ್ತದೆ ಎನ್ನುವುದನ್ನು. ಅದರ ಬಗ್ಗೆ ವಿಷಾದಕರವಾದ ಅನುಭವವಿದೆ. ಅದರ ಬೆಳವಣಿಗೆ ಯಾಗಿಲ್ಲ. ಅದು ಖಾಸಗಿ ಉದ್ದಿಮೆದಾರರ ಜೊತೆಯಲ್ಲಿ ನಿಲ್ಲಲಾರದೆ ಹೋಗಿದೆ. ಮಾನ್ಯ ದಿವಂಗತ ವಿಶ್ವೇಶ್ವರಯ್ಯನವರು ಭದ್ರಾವತಿ ವಿಷಯದಲ್ಲಿ ಮತ್ತು ಅದರ ಬೆಳವಣಿಗೆ ವಿಷಯದಲ್ಲಿ ಏನು ಕನಸು

ಕಂಡಿದ್ದರೋ ಅದು ಇಂದು ನನಸಾಗಲಿಲ್ಲ ಎನ್ನುವುದರ ಬಗ್ಗೆ ವಿಷಾದದಿಂದ ಇದ್ದೇನೆ. ಅದು ಬೆಳೆಯುತ್ತಿದೆ ಎಂದು ಹೇಳುತ್ತಾರೆ. ರಾಜ್ಯದಲ್ಲಿರುವ ಕೈಗಾರಿಕೆಗಳನ್ನು ಕೆಟ್ಟ ರೀತಿಯಲ್ಲಿ ಮ್ಯಾನೇಜ್ ಮಾಡಿ ನಷ್ಟಗಳನ್ನು ತೋರಿಸಿ ಮುಚ್ಚುವವರೆಗೂ ಗತ್ಯಂತರವಿಲ್ಲ ಎಂದು ಮುಚ್ಚಿಸಿ ಅದನ್ನು ಬೇರೆ ಯಾವರಿಗೆ ಕೊಡತಕ್ಕುದು ಅಥವಾ ಮುಚ್ಚತಕ್ಕದ್ದು. ಮೂರು ಪಂಚವಾರ್ಷಿಕ ಯೋಜನೆಗಳ ನಂತರವೂ ಇವತ್ತು ಕೈಗಾರಿಕೆಗಳು ಮುಚ್ಚುತ್ತಿವೆ, ಅಲ್ಲಿ ಇದ್ದಂಥ ಜನರು ನಿರುದ್ಯೋಗಕ್ಕೆ ಬಲಿಯಾಗಿದ್ದಾರೆ ಎಂದರೆ ಇದು ಯೋಜನೆಗಳ ವಿಫಲತೆಯನ್ನು ಎತ್ತಿ ತೋರಿಸತಕ್ಕ ಒಂದು ದೃಷ್ಟಾಂತ ಮಾತ್ರ. ಅನೇಕ ವಿಫಲತೆಗಳಿವೆ. ಅದರಲ್ಲಿ ಇದು ಒಂದು ದೊಡ್ಡ ವಿಫಲತೆ. ಇದನ್ನು ಸರಿಪಡಿಸಬೇಕಾದರೆ ಈ ಕೈಗಾರಿಕೆಗಳನ್ನು ನಾವು ಹೇಗೆ ಕಟ್ಟಬೇಕು, ಅವುಗಳಿಗೆ ಯಾವ ಯಾವ ಕಚ್ಚಾ ಮಾಲುಗಳನ್ನು ನಾವು ದೊರಕಿಸಿಕೊಳ್ಳಬೇಕು ಎನ್ನುವುದನ್ನೂ ಯೋಚನೆ ಮಾಡಬೇಕು. ಕಚ್ಚಾ ಮಾಲುಗಳನ್ನು ನಾವು ಒದಗಿಸತಕ್ಕ ನೀತಿಯಿಂದ ಆಗಬಹುದು ವ್ಯಾಪಾರ ಮತ್ತು ದರ ಗೊತ್ತುಮಾಡತಕ್ಕ ನೀತಿಯಿಂದ ಆಗಬಹುದು, ಈ ದೃಷ್ಟಿಯಿಂದ ಯಾವುದಾದರೂ ಕೈಗಾರಿಕೆ ಮುಚ್ಚಿದ್ದರೆ ಅದನ್ನು ಸರಿಪಡಿಸುವುದಕ್ಕೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ, ಅವರ ಇಂಪೋರ್ಟ್ ಮತ್ತು ಎಕ್ಸ್‌ಪೋರ್ಟ್ ನೀತಿ ಲೈಸನ್ಸ್ ಕೊಡತಕ್ಕ ನೀತಿ ಹತೋಟಿಗೆ ಒಳಪಟ್ಟ ಕಚ್ಚಾ ಮಾಲುಗಳನ್ನು ಒದಗಿಸತಕ್ಕ ನೀತಿ, ಇದರಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕು. ಆದರೆ ರಾಜ್ಯ ಸರ್ಕಾರದವರು ಹೀಗೆ ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ.

ಶ್ರೀಮಾನ್ ನಿಜಲಿಂಗಪ್ಪನವರು ಸಣ್ಣ ಕಾರು ಮಾಡಬೇಕು ಎಂದು ಹೇಳಿದರು. ಮಾನ್ಯ ನಾಗರತ್ನಮ್ಮನವರು ನಿಮಗೆಲ್ಲಾ ನಗು, ಸಣ್ಣ ಕಾರು ಎಂದರೆ ನಿಮಗೆ ಹುಡುಗಾಟವಾಗಿದೆ ಎಂದರು. ಸಣ್ಣ ಕಾರು ಮಾಡಲಿ, ದೊಡ್ಡ ಕಾರು ಮಾಡಲಿ ಏನಾದರೂ ಮಾಡಲಿ ನಮಗೆ ನಗು ಬರುವುದಿಲ್ಲ. ಆದರೆ ಯಾವುದಾದರೂ ಒಂದು ತಿರುಕನ ಕನಸಿನಂತೆ ಕಂಡುಬಂದರೆ ಸ್ವಾಭಾವಿಕವಾಗಿ ನಮಗೆ ನಗು ಬರುತ್ತದೆ. ಕನಸು ನನಸಾಗುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎನ್ನುವುದು ಮುಖ್ಯವಾದ ಪ್ರಶ್ನೆ. ನಾವು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಮಾಡಿದ್ದೇವೆ. ಈ ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ಖಾಸಗಿಯವರ ಬಸ್ಸುಗಳನ್ನು ಕೊಳ್ಳುತ್ತೀರಿ. ನಿಮ್ಮ ಹತ್ತಿರ ಒಂದು ಒಳ್ಳೆಯ ಗ್ಯಾರೇಜ್ ಇಲ್ಲ, ಬಾಡಿ ಬಿಲ್ಡಿಂಗಿಗೆ ಬೇಕಾದ ವ್ಯವಸ್ಥೆ ಇಲ್ಲ, ಅದಕ್ಕೆ ಸಂಬಂಧಪಟ್ಟ ಉದ್ಯಮಗಳನ್ನು ರೂಪಿಸುವುದಕ್ಕೆ ತಯಾರಿಲ್ಲ. ಖಾಸಗಿ ಉದ್ದಿಮೆದಾರರ ಜೊತೆಯಲ್ಲಿ ಸ್ಪರ್ಧೆ ಮಾಡುತ್ತೇವೆಂದು ಹೊರಟಿದ್ದೀರಿ.

ಈ ದೇಶದಲ್ಲಿ, ಭಾರತ ದೇಶದಲ್ಲಿ ಸಮಾಜವಾದವನ್ನು ಕಾಂಗ್ರೆಸ್ಸಿನವರು ಒಪ್ಪಿಕೊಂಡಿದ್ದಾರೆ. ಅವರು ಇವತ್ತಿನವರೆಗೂ ಸಾರ್ವಜನಿಕ ವಲಯದಲ್ಲಿ ಬಸ್ ತಯಾರು ಮಾಡತಕ್ಕ, ಟ್ರಾಕ್ಟರುಗಳನ್ನು ತಯಾರು ಮಾಡತಕ್ಕ, ಟೈರುಗಳನ್ನು ತಯಾರು ಮಾಡತಕ್ಕ, ಇಂಥ ಯಾವುದಾದರೂ ಮೂಲ ಕೈಗಾರಿಕೆಗಳನ್ನು ಆರಂಭ ಮಾಡಿ ಬೆಳೆಸಿದ್ದೀರಾ ಎನ್ನುವುದನ್ನು ನಾವು ನೋಡಿದರೆ ಇವು ಖಾಸಗಿ ವಲಯದಲ್ಲಿ ಹೆಚ್ಚು ಪ್ರೋತ್ಸಾಹ ಪಡೆದು, ಸರ್ಕಾರದ ಸಾಲಗಳು ಮತ್ತು ಫಾರೆನ್ ಎಕ್ಸ್‌ಛೇಂಜ್ ಇವೆಲ್ಲವನ್ನು ಪಡೆದು 20 ಕೋಟಿ ರೂಪಾಯಿಯತನಕ ಇದ್ದ ಒಬ್ಬ ವ್ಯಕ್ತಿ ಇವತ್ತು 200 ಕೋಟಿ ರೂಪಾಯಿಗಳಿಗೆ ಇನ್‌ಕಂಟ್ಯಾಕ್ಸ್ ಕೊಡುವುದರ ಮಟ್ಟಕ್ಕೆ ಬಂದಿದ್ದಾನೆ. ಈ 20 ವರ್ಷಗಳಲ್ಲಿ ಇದರಿಂದ ಏನಾಗುತ್ತದೆಂದರೆ, ರೋಡ್ ಟ್ರಾನ್ಸ್‌ಪೋರ್ಟಿಗೆ ನಷ್ಟವಾಗುತ್ತದೆ. ಸಕಾಲಕ್ಕೆ ಬಸ್ಸುಗಳು ಓಡಾಡುವುದಿಲ್ಲ. ಓಡಾಡುವ ಬಸ್ಸುಗಳಿಗೆ ಸೌಲಭ್ಯ ಚೆನ್ನಾಗಿಲ್ಲ. ಆದ್ದರಿಂದ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನನ್ನು ಯಾರಾದರೂ ಖಾಸಗಿ ಉದ್ಯಮಿಗಳಿಗೆ ಕೊಟ್ಟುಬಿಡಲಿ. ಅದನ್ನು ಕೆಟ್ಟ ರೀತಿಯಲ್ಲಿ ದುರಾಡಳಿತದಿಂದ ನಡೆಸಿ ಇನ್ನು ಅವರಿಂದ ನಷ್ಟ ತೋರಿಸಿದರೆ ಪ್ರಯೋಜನವಿಲ್ಲ, ಹೀಗೆ ನಡೆಸುವುದಕ್ಕೂ ಸಾಧ್ಯವಿಲ್ಲ. ಸಮಾಜವಾದದಲ್ಲಿ ಇಂಥ ಕಾರ್ಯಕ್ರಮಗಳು ಸಾಧ್ಯವಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಯಾವುದೇ ಕೈಗಾರಿಕೆಯನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಕೊನೆಗೆ ಕಾಂಗ್ರೆಸ್ ಅಧಿಕಾರವನ್ನು ಪೂರ್ತಿಯಾಗಿ ಕಳೆದುಕೊಳ್ಳುವಾಗ ಸಮಾಜವಾದ ಜಾರಿಗೆ ತರುವುದಕ್ಕೆ ಹೋಗುವುದು ವಿಚಿತ್ರ. ಈಗ ಆಡಳಿತ ನಡೆಸುತ್ತಿರುವವರಲ್ಲಿ ನೈತಿಕ ಮಟ್ಟವಿಲ್ಲ, ಇವರಲ್ಲಿ ಪ್ರಾಮಾಣಿಕತೆ ಇಲ್ಲ, ಲಂಚ ರುಷುವತ್ತುಗಳು ತುಂಬಿವೆ. ಆದ್ದರಿಂದ ಇವರನ್ನು ಕಟ್ಟಿಕೊಂಡು ನಾವು ಸಮಾಜವಾದ ಸಮಾಜವನ್ನು ಕಟ್ಟುವ ತೀರ್ಮಾನವನ್ನು ಬಹುಶಃ ಪ್ರಯೋಗಿಸಿ, ಜನರಿಗೆ ತೋರಿಸಿಕೊಡಬೇಕೆಂದು ಕಾಣುತ್ತದೆ, ಬೇರೇನೂ ಕಾಣುವುದಿಲ್ಲ.

ಇಷ್ಟಲ್ಲದೆ ಮಾನ್ಯ ಮುಖ್ಯಮಂತ್ರಿಯವರು ; ಭ್ರಷ್ಟ ಅಥವಾ ಲಂಚಕೋರ ಅಧಿಕಾರಿಗಳನ್ನು ಶಿಕ್ಷಿಸುವುದು ಹೆಚ್ಚು ಕಠಿನ ಅಸಾಧ್ಯವೆಂದು ಹೇಳಿದರು. ಕಾನೂನು ದೃಷ್ಟಿಯಿಂದ ಸ್ವಲ್ಪ ಮಟ್ಟಿನ ತೊಂದರೆ ಇರಬಹುದು. ಒಮ್ಮೆಗೆ ಡಿಸ್‌ಮಿಸ್ ಮಾಡಲಿಕ್ಕೆ ಆಗಿರಬಹುದು ; ಆದರೂ ಈ ಒಂದು

(ಶ್ರೀ ಎಸ್. ಗೋಪಾಲಗೌಡ)

ಅಸಹಾಯಕತೆಯನ್ನು ತೋರಿಸಿದ್ದಾರೆ; ಅವರಿಂದ ನಾವು ಏನು ನಿರೀಕ್ಷೆ ಮಾಡಿದ್ದೇವೋ ಅದು ಪೂರೈಸಲಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ವರ್ಷದಲ್ಲಿ ಕೆಲವು ಮುಖ್ಯವಾದ ವಿಷಯಗಳನ್ನು ಕೈಕೊಳ್ಳುವ ಬಗ್ಗೆ ಹೇಳಿಕೊಂಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ ನಮ್ಮ ಎಲ್ಲಾ ಹಣ ಕಾಸಿನ ಸಂಪತ್ತನ್ನು ಹೆಚ್ಚಾಗಿ ವಿನಿಯೋಗಿಸಿ, ನೀರಾವರಿ ಬಾವಿಗಳನ್ನು ಮಾಡಿ, ನಾಲ್ಕನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ 10-15 ಲಕ್ಷ ಟನ್ ಅಹಾರವನ್ನು ಹೆಚ್ಚುವರಿ ಮಾಡುತ್ತೇವೆಂದು ಹೇಳಿದ್ದಾರೆ. ಭೂಸುಧಾರಣೆ ಇಲ್ಲದೆ, ಭೂಮಿಯ ಸರಿಯಾದ ವಿತರಣೆ ಇಲ್ಲದೆ; ತಂದಿರತಕ್ಕಂತಹ ಕಾನೂನನ್ನು ಜಾರಿಗೆ ಕೊಡದೆ, ಭೂಸ್ವಾಮಿಗಳ ಒತ್ತಾಯಕ್ಕೆ ಮಣಿದು, ಅದನ್ನು ವಿಳಂಬ ಮಾಡುತ್ತಾರೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಎಷ್ಟು ಒತ್ತಾಯಪಡಿಸಿದರೂ ಸರ್ಕಾರದವರು ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಟ್ರಿಬ್ಯೂನಲ್ ರಚನೆ ಮಾಡಿ, ಭೂಸುಧಾರಣೆ ತರಬೇಕು. ಇವತ್ತಿನ ದಿವಸ ಕೆಲವರು ಸೀಲಿಂಗ್ ಬಹಳ ಜಾಸ್ತಿ ಇದೆ ಎಂದು ಹೇಳುತ್ತಾರೆ. ಮೊನ್ನೆ ರಾಮಕೃಷ್ಣ ಹೆಗಡೆಯವರು ಭೂಮಿಯ ಮೇಲಿನ ಕಂದಾಯ ತೆಗೆದು ಹಾಕುತ್ತೇವೆಂದು ಹೇಳಿದರು. ಕೊನೆಗೆ ತದ್ವಿರುದ್ಧವಾಗಿ ಕೆಲವರು ಭಾಷಣ ಮಾಡಿದರು. ಮೂರು ಕೋಟಿ ನಷ್ಟವಾಗುತ್ತದೆ, ನಾಲ್ಕುವರೆ ಕೋಟಿ ನಷ್ಟವಾಗುತ್ತದೆ, ಗ್ರಾಮಾಭಿವೃದ್ಧಿಗಳಿಗೆ ಏನು ಕೊಡುವುದು ಎಂಬೆಲ್ಲಾ ಕೇಳಿ ಒಂದು ರೀತಿಯಲ್ಲಿ ಗೊಂದಲವನ್ನು ತಂದುಹಾಕಿದ್ದಾರೆ. ಕೊನೆಗೆ ಎಲ್ಲಿ ಕೃಷಿ ಲಾಭದಾಯಕವಾಗಿಲ್ಲವೋ ಅಲ್ಲಿಯಾದರೂ ಜಾರಿ ಮಾಡಿ. 100ಕ್ಕೆ 80 ಜನರಿಗಾದರೂ ಪರಿಹಾರ ನೀಡಲಿ. ಉಳಿದ 20 ಪರ್ಸೆಂಟ್ ದೊಡ್ಡದೊಡ್ಡವರು ಏನಿದ್ದಾರೆ ಅವರು ಅದೇನಾದರೂ ಮಾಡಲಿ, ಇವತ್ತು ಮುಖ್ಯವಾಗಿ ದೇಶದಲ್ಲಿ ಬೇಸಾಯದ ಕೂಲಿಗಾರರನ್ನು ಸರ್ಕಾರ ತೀರ ಕಡೆಗಣಿಸಿದೆ. ಅವರಿಗೆ ಕೂಲಿ ಸಿಗಬಹುದು ಸಿಗದಿರಬಹುದು. ಹೋದ ಸಲ ಕ್ಷಾಮ ಬಂದು ಇಂಥ ಜನರೆಲ್ಲಾ ಪಟ್ಟಣಗಳಿಗೆ ವಲಸೆ ಬರುತ್ತಾರೆ ಮತ್ತು ಸ್ಲಂಗಳಲ್ಲಿ ವಾಸ ಮಾಡುತ್ತಾರೆ, ಮತ್ತು ಸಂಕಷ್ಟಗಳಿಗೆ ಗುರಿಯಾಗುತ್ತಾರೆ. ವ್ಯವಸಾಯಗಾರರ ಆರ್ಥಿಕ ಪರಿಸ್ಥಿತಿ ಬಹಳ ಕಷ್ಟ ಪರಿಸ್ಥಿತಿಯಲ್ಲಿದೆ. ನಾನು ಸಲಹೆ ಮಾಡಿವೆ, ಒಂದು ಭೂಸೈನ್ಯವನ್ನು ಏರ್ಪಾಡು ಮಾಡಿ, ಒಂದು ಲಕ್ಷ ಜನರನ್ನು ಸೇರಿಸಿ, ಅವರನ್ನು ಸಾಯಿಲ್ ರಿಕ್ಲಮೇಷನ್, ಪಿ. ಡಬ್ಲ್ಯೂ. ಡಿ. ಮೊದಲಾದವುಗಳಿಗೆ ನೇಮಿಸಿಕೊಂಡು. ಅವರ ಮೂಲಕ ಕೆಲಸಗಳನ್ನು ತೆಗೆದುಕೊಳ್ಳಿ ಎಂದು. ಇವರನ್ನು ಬೇಕಾದರೆ, ಊರಿಂದ ಊರಿಗೆ ತೆಗೆದುಕೊಂಡು ಹೋಗಬಹುದು. ಜನತೆಗೆ ಉದ್ಯೋಗ ಕೊಡಬಹುದು. ಹೊಸದಾಗಿ ಭೂಮಿಯನ್ನು ಏನು ಸಾಗುವಳಿಗೆ ತರುತ್ತಾರೆ, ಅಲ್ಲಿ ಅವರಿಗೆ, ನೇರವಾಗಿ ನೀರಾವರಿ ಸೌಕರ್ಯ, ಟ್ರಾಕ್ಟರ್ಸ್ ಗೊಬ್ಬರ, ಬೀಜ, ಎಲ್ಲಾ ಕೊಟ್ಟು ಆದರ್ಶವಾದ ಫಾರ್ಮು ಮಾಡಿ ನೆಲಸಿಕೊಳ್ಳಬಹುದು. ಅದನ್ನು 20 ವರ್ಷಗಳ ಹಿಂದೆ ಮಾಡಿದ್ದರೆ, ಇವತ್ತಿನ ದಿವಸ ಏನು 20 ಲಕ್ಷ ಕೂಲಿಗಾರರಿದ್ದಾರೆ, ಅವರನ್ನು ಹೊಸದಾಗಿ ನೆಲಸಿಕೊಳ್ಳಬಹುದಾಗಿತ್ತು; ಸಣ್ಣ ಕೈಗಾರಿಕೆಗಳಲ್ಲಿ ಅಥವಾ ಟ್ರಾನ್ಸ್‌ಪೋರ್ಟಿನಲ್ಲಿ ಸೇರಿಸಿಕೊಳ್ಳಬಹುದಾಗಿತ್ತು. ಈ ಕೆಲಸಗಳನ್ನು ಸರ್ಕಾರದವರು ಮಾಡದೆ ಹೋದರೆ ಈಗಾಗಲೇ ಉಲ್ಬಣಿಸಿರತಕ್ಕಂತಹ ನಿರುದ್ಯೋಗ ಸಮಸ್ಯೆಗೆ ಬೆಂಕಿ ಹಚ್ಚಿದಂತೆ ಆಗುತ್ತದೆ. ಇದರಿಂದ ಉದ್ಯೋಗವಿಲ್ಲದಿರತಕ್ಕ ಜನ ಬಹಳವಾಗಿ ತನ್ನ ಜೀವನಮರಣ ಹೋರಾಟಕ್ಕೆ ಸಿದ್ಧವಾಗಬೇಕಾಗುತ್ತದೆಂದು ಹೇಳುತ್ತೇನೆ.

ಕೊನೆಯದಾಗಿ, ಮಾನ್ಯ ಸಚಿವರು ಬೆಂಗಳೂರು ಕಾರ್ಪೊರೇಷನ್ ರದ್ದು ಮಾಡಿದರು. ಕಾರ್ಪೊರೇಷನುಗಳನ್ನು, ಸ್ಥಳೀಯ ಸಂಸ್ಥೆಗಳನ್ನು ರದ್ದು ಮಾಡುವುದು ಅವರ ಒಂದು ಸಂಪ್ರದಾಯವಾಗಿದೆ. ಪಂಚಾಯ್ತಿಗೂ ಚುನಾವಣೆ ಮಾಡುತ್ತೇವೆಂದು ಹೇಳಿದರು. ತಾಲ್ಲೂಕು ಬೋರ್ಡಿಗೆ ವಿಚಾರ ಮಾಡುತ್ತೇನೆಂದು ಹೇಳುತ್ತಾರೆ. ಈ ಸಾರ್ವಜನಿಕ ಚುನಾವಣೆಯನ್ನು ನಾವು ಮಾಡುವುದಕ್ಕೆ ತುರ್ತುಪರಿಸ್ಥಿತಿ ಇಲ್ಲವೆಂದು ಕಂಡುಬಂದಾಗ, ಸರ್ಕಾರದವರು ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡುವ ವಿಷಯಕ್ಕೆ ತುರ್ತುಪರಿಸ್ಥಿತಿಯನ್ನು ಮುಂದಿಡದೇ ಆದಷ್ಟು ಬೇಗ ಕೊಂಡಜ್ಜಿ ಬಸಪ್ಪನವರ ವರದಿಯ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಹಣವನ್ನು ಮತ್ತು ಅಧಿಕಾರವನ್ನು ಕೊಡಬೇಕು. ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಹಣ ಮತ್ತು ಅಧಿಕಾರ ಕೊಡತಕ್ಕ ಒಂದು ಮಸೂದೆಯನ್ನು ತಂದು ಈ ಸಂಸ್ಥೆಗಳಿಗೆ ಒಂದು ಚುನಾವಣೆಯನ್ನು ನಡೆಸಿ, ಚುನಾಯಿತ ಪ್ರತಿನಿಧಿಗಳಿಂದ ದೇಶದ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕು. ಇಲ್ಲದಿದ್ದರೆ, ಅಧಿಕಾರಿಗಳು, ತಾವು ತಾವೇ ಆಗಿ, ವರ್ತಿಸಿ ಅದರಿಂದ ಕೆಟ್ಟ ಪರಿಣಾಮವಾಗುತ್ತದೆ, ಅದನ್ನು ತಡೆಗಟ್ಟುವುದಕ್ಕೆ ಅಸಾಧ್ಯವಾಗಬಹುದು ಎಂದು ನಾನು ಹೇಳುತ್ತೇನೆ. ಕಾರ್ಪೊರೇಷನ್‌ಗೆ ಬುದ್ಧಿವಾದ ಕೊಡುವುದಕ್ಕೆ ಒಂದು ಕನ್ಸಲ್ಟೇಟಿವ್ ಕಮಿಟಿ ಎಂದು ಮಾಡುವುದಕ್ಕೆ ಹೊರಟಿದ್ದೀರಿ. ಇಂಥ ಹುಚ್ಚು ಸಾಹಸಗಳಿಗೆ ತಾವು ಕೈ

ಹಾಕಬಾರದು. ಅವುಗಳಿಗೆ ಇನ್ನಾದರೂ ಚುನಾವಣೆ ಮಾಡಬೇಕು. ಅಥವಾ ಬೇರೆ ರೀತಿಯಿಂದ ಏನು ಮಾಡಬೇಕೆನ್ನುವ ಬಗ್ಗೆ ವಿಚಾರ ಮಾಡಿ, ಸುಪರ್‌ಸೀಡ್ ಯಾವ ಕಾರ್ಪೊರೇಷನ್ ಆಗಿರಲಿ, ಅದಕ್ಕೆ ಪುನಃ ಜನತೆಯಿಂದ ಚುನಾಯಿತರಾದ ಪ್ರತಿನಿಧಿಗಳು ಬರುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ತಿಳಿಸಿ, ಈ ಮಸೂದೆಯನ್ನು ವಿರೋಧಿಸುತ್ತಾ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI DIGAMBARRAO BALWANTRAO (Aland).—Mr. Speaker, Sir, while opposing the Mysore Appropriation (No. 2) Bill before the House, I want to make a few observations regarding certain problems of my area and also in general. Regarding rural development, I have to submit that the rules that are in force are such that only the big landholders and the rich peasants are being benefited and the small holders with 5, 10 and 15 acres are not being benefited and all the loans are being availed of by the big landholders. So I would suggest that the system of evaluation of lands for the purpose of takkavi loans and other loans may be changed so as to bring the small holders within its scope. At present what they do is that if Re. 1 is the land revenue on one acre of land, in such a case only Rs. 75 is the evaluation made of the land and the loan given to the landholder is based on that only. I am particularly referring to the hardships of the small landholders of Hyderabad-Karnataka area where there are dry lands with small holders having a holding of 5, 10 and 15 acres. They cannot get any big amount so as to solve their immediate problems such as digging of wells, putting boundaries or for any general purpose. So I suggest that the system of evaluation of lands may be drastically changed so as to bring the small holders within its scope. The other day the Divisional Commissioner had been to Aland and then this suggestion was made to him and he also appreciated it. If this suggestion is accepted then the small holders who are badly in need of such loans will be covered and the purpose of advancing loans will be served and that will also help in raising production of foodgrains.

It has been noticed that in many villages in Aland taluk as also in other parts even after the functioning of the popular Government for 20 years, they are not having wells for drinking water purposes. Particularly, I submit that the Harijanwadas which are outside the village limits are not provided with these wells. So I suggest that these villages may be given drinking water wells without any delay and their problem for drinking water may be solved.

Regarding sanitation, communications, community halls and hospitals in the villages, I have to submit that community halls are not at all there in many of the villages. Even if they are provided, they are provided only in such villages from where Congress Legislators have come. In this matter also partiality is being shown on the basis of the political leanings of the people there. I would submit that wherever there are Harijanwadas these community halls are absolutely required and they must be provided with these community halls. So also hospitals may be made available.

(SRI DIGAMBAR RAO BALAWANT RAO)

Then I would come to Grampanchayats and Taluk Boards. At the very outset I would suggest that elections to Gram Panchayats and Taluk Boards are long awaited. The other day the Minister said that Gram Panchayat elections could be held in January 1968. If Gram Panchayat elections could be held in every village, I cannot understand why Taluk Board elections could not be held. It is something unreasonable and against the spirit of democracy. I would suggest that the only remedy for that would be to hold both the Gram Panchayat elections and the Taluk Board elections at the same time. This has taken place in Maharashtra and other States. The conditions here also are similar as they obtained there. So the Gram Panchayat elections and the Taluk Board elections may be treated alike and they may be conducted at the earliest.

Regarding the work of the taluk boards, many members have said that taluk boards have outlived their purpose and they are not doing any good work. My submission in this respect is that as we have adopted the policy of decentralisation, the powers of the Gram Panchayats and Taluk Boards and their activities may be enlarged. We have only to see that whatever work is done is done efficiently and for the good of the common man. Now there are many things that are happening. We find that the Taluk Board undertakes construction of school buildings, panchayat offices and other buildings, but it is our experience that these buildings that are constructed crumble down within two or three years. This is what we see in rural areas. That means whatever is being spent is not being spent fully and there is a lot of corruption in collusion with the contractor and the taluk board. This, I suggest, should be stopped and the leadership at the taluka level must realise the responsibilities and take steps to see that every pie of the sanctioned amount is spent for the purpose for which it was meant.

There are many schools in Aland which are incomplete though 5 or 6 years have passed. There are certain houses constructed for Harijans particularly. To cite an instance, there is a big Harijanwada where the houses are half complete and when the people go and ask for the second instalment they are denied the same and thus things are delayed. There was one B.D.O. who made a survey of such schools and houses that were undertaken by the Taluk Board and he found that in many of the houses undertaken there was a lot of misappropriation and overpayment and there were no vouchers, there were so many bogus transactions. But immediately he submitted this report. This B.D.O. was transferred to another place. After that the Divisional Commissioner ordered that enquiry may be held, but even now that enquiry is not completed and the works are suffering. This is happening only because the leaders at the helm of affairs are of the party in power and there are some people who want to see that they are not exposed and that is how things are going on. In this connection, I would like to point out certain loopholes that have been made out in the Audit Report 1965-66, at page 190—para 181. There were so many outstanding audit objections and there

are inspection reports. It is found that 15·38 lakhs of rupees are without any detail contingent bills. Also, Rs. 2·82 lakhs are found to be spent without any receipts and vouchers of payees. It is stated at page 74—para 5 of the same Report that a test check was made in regard to Takavi loans to the extent of Rs. 15·72 lakhs given to the cultivators in Sindhanoor Taluk of Raichur District, where it has been found that a sum of Rs. 13·07 lakhs was outstanding till the end of February 1966. That shows how the works are going on.

3-30 P.M.

Coming to co-operatives, less said the better, because a lot has been said by Members of all parties irrespective of their labels. Almost all the co-operatives are indulging in malpractice, and there is no sense of co-operation prevailing in these co-operatives. There is again a partisan spirit working in these co-operatives. As it is, most of the co-operatives are manned by Congress people and they would never extend the benefit of these societies to those who are opposed to them and those who are sincere and honest. Congress people are afraid of being exposed if sincere and honest people are there. In this way, sincere and honest people are denied the opportunity though the Co-operative Societies Act does not provide like that. There is one Weavers Co-operative Society at Hiroli called Banashankari Society. As it was rightly pointed out by some members, this society is manned by many rich people, who are doing business in money lending. The Chairman of this Society is a lakheer and he is utilising the amount of the society for other purposes, such as smuggling of grains into Maharashtra, etc. Some cases are also pending against him in the Court. That is how the spirit of co-operation is evaporating and people are losing faith in the benefits or the desirability of opening new societies or continuing the existing societies on account of the blacksheep that we find in many societies. There is one Weavers Co-operative Society at Aland, which is provided with power-looms. But, they are not in use. Many criticisms are there in the Audit Report in this regard.

About the general administration, I would like to say a few words. A question was also put and answered in the House the other day, as to why the Municipal Commissioner of Gulbarga was transferred. It is well-known and the report of the Divisional Commissioner has also come to the Secretariat, that the Commissioner was not allowing bad things that were going on in the municipal affairs. There was the question of brokerage; the brokerage was not accounted for by the President of the Municipality. Some brokerage was drawn on Rs. 32 lakhs which was put in a particular Bank in a particular person's name. This brokerage was not added to the municipal funds. This dealing came to light when another Rs. 66 lakhs was put in the Bank. Some irregularities were happening in this Municipality which the Commissioner did not allow them to be continued. As such, the Municipality thought that it would be better to have the Commissioner transferred to same other place.

(SRI DIGAMBAR RAO BALAVANT RAO)

These things were done at the connivance of the members of the Party in power, who tried their best to get the Commissioner transferred from there. I brought this to the notice of the Hon'ble Chief Minister. It is not correct to transfer officers who are doing good work, and to say that you are not having good officers. In spite of these things specifically brought to the notice of the Hon'ble Chief Minister, he was transferred from that place. Sir, I understand that no other Commissioner is prepared to go to Gulbarga. When such things are brought to the notice of the Government, they should take it in the right spirit and see that injustice is not done either to the services or to the people.

With these observations, since the time at my disposal is over though I had many more points to say, I conclude and thank the Speaker.

Mr. SPEAKER.—The reply will begin at 4-15 P.M. Till then, I will allow only members on the Opposition side to speak.

Sri S. D. KOTHAVALE (Sankeshwar).—Sir, I want about 5 minutes.

Mr. SPEAKER.—I will make an exception in this case. Now I call upon Sri Sharana Gowda to speak and to be brief.

† ಶ್ರೀ ಶರಣಗೌಡ ಇನಾಂದಾರ್ (ಜೇವರ್ಗಿ).—ಅಧ್ಯಕ್ಷರೇ, ಹಣಕಾಸಿನ ಸಚಿವರು ಮಂಡಿಸಿರುವ ಅಪ್ರೋಪ್ರಿಯೇಷನ್ ಬಿಲ್ಲನ್ನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಮಂಡಿಸಲು ಅಪ್ಪಣೆ ಬೇಡುತ್ತಿದ್ದೇನೆ. ಮೊಟ್ಟಮೊದಲು ನಮ್ಮ ಸರ್ಕಾರದವರು ಬಾರ್ಡರ್ ಕಮಿಷನ್ ಬಗ್ಗೆ ಏನೊಂದು ಧೋರಣೆ ತಾಳಿದ್ದಾರೆ ಅದು ನಿಜವಾಗಿಯೂ ಕರ್ನಾಟಕದಲ್ಲಿರುವ ಜನರ ಅಭಿಮಾನಕ್ಕೆ ಬಹಳ ಕುಂದು ತರುವುದು ಎಂದು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಮೊಟ್ಟಮೊದಲು One man Commission ರಚಿಸಲು ಸರಕಾರ ಒಪ್ಪಿತ್ತು. ಈ ಕಮಿಷನ್ ಮೈಸೂರಿನ ಎಲ್ಲಾ ಗಡಿ ನಿರ್ಣಯಮಾಡುವುದಿಲ್ಲ. ಇದು ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕೇರಳ—ಈ ನಾಲ್ಕು ಪ್ರದೇಶಗಳ ಸುತ್ತುಗಟ್ಟಿ ಮತ್ತು ಇದರ ಜೊತೆಗೆ ಡಿಸ್ಪ್ಯೂಟೆಡ್ ಏರಿಯಾ ಏನಿದೆ ಇದನ್ನೆಲ್ಲಾ ನೋಡಿ ಒಂದೇ ಕಾಲದಲ್ಲಿ ಎಲ್ಲಾ ಸರಿಪಡಿಸುವ ಹಾಗಿದ್ದರೆ ಸ್ವಲ್ಪ ವಿಚಾರಮಾಡಬಹುದಾಗಿತ್ತು. ಅದರೆ ಈ ಕಮಿಷನ್ ಮಹಾರಾಷ್ಟ್ರ ಮತ್ತು ಕೇರಳಕ್ಕೆ ಮಾತ್ರ ಸಹಾಯ ಮಾಡುವುದು. ಮತ್ತು ಕೆರಳ ಸಮಸ್ಯೆ ಇಲ್ಲಿ ಬರುವಹಾಗಿಲ್ಲ, ಅಲ್ಲಿ ಪ್ರೆಸಿಡೆಂಟ್ ರೂಲು ಕಮಿಷನ್ ನೇಮಕ ಮಾಡಿದಾಗ ಇತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಕೇರಳದಲ್ಲಿ ಪಾಪ್ಯುಲರ್ ಗವರ್ನಮೆಂಟಿಲ್ಲವೆ ಪ್ರೆಸಿಡೆಂಟ್ ರೂಲ್ ಇರುವುದರಿಂದ ರಾಜ್ಯಪಾಲರು ಅಬ್‌ಜೆಕ್ಷನ್ ತೆಗೆದುಕೊಳ್ಳಬಹುದು, ಅದುಧರಿಂದ ಅದರ ಸಮಸ್ಯೆ ಬಗೆಹರಿಸುವುದಕ್ಕಾಗುವುದಿಲ್ಲ ಎಂದು ಕೇರಳದ ವಿಷಯವನ್ನು ಬಿಟ್ಟಿದ್ದರೆ ಇದನ್ನೆಲ್ಲಾ ಆಲೋಚನೆಮಾಡದೆ ಕನ್ನಡಿಗರ ಹಕ್ಕುಭಾಧ್ಯತೆ ಬಗ್ಗೆ ಸರಿಯಾಗಿ ವಿಚಾರಮಾಡದೆ ಒಪ್ಪಿಕೊಂಡಿರುವುದು ಶೋಚನೀಯ. ಅಲ್ಲದೆ ಅಕ್ಕಲಕೋಟೆ ಮತ್ತು ಕೊಲ್ಲಾಪುರಕ್ಕೆ ನಾನು ಒನ್ ಮ್ಯಾನ್ ಕಮಿಷನ್ ಬರುವುದಕ್ಕೆ ಮುಂಚೆ ಹೋಗಿದ್ದೆ. ಅಲ್ಲಿರುವ ಕನ್ನಡಿಗರಿಗೆ ಮಹಾರಾಷ್ಟ್ರ ಪೋಲೀಸಿನವರು, ರೆವೆನ್ಯೂ ಖಾತೆಯವರು, ಅಹಾರ ಇಲಾಖೆ ಅಧಿಕಾರಿಗಳು ಮಾಡಿದ ಅನ್ಯಾಯ ಹೇಳತೀರದು. ಇಸ್ರೇಲ್‌ನಲ್ಲಿ ಅರಬ್ಬರನ್ನು ನೋಡಿಕೊಳ್ಳುತ್ತಾ ಇದ್ದಾರಲ್ಲಾ ಆ ಪ್ರಕಾರ, ಅಥವಾ ಅರಬ್ಬಿಸ್ಥಾನದಲ್ಲಿ ಇಸ್ರೇಲ್ ಜನರನ್ನು ಯಾವ ಪ್ರಕಾರ ನೋಡಿಕೊಳ್ಳುತ್ತಾ ಇದ್ದಾರೋ ಆ ಪ್ರಕಾರ ನೋಡುವಂತಹ ಪ್ರಸಂಗ ಬಂದದ್ದು ಬಹಳ ಶೋಚನೀಯವಾದುದು ಎಂದು ಹೇಳಬೇಕಾಗಿದೆ. 3-4 ದಿವಸ ಅಕ್ಕಲಕೋಟೆಯ ತಾಲ್ಲೂಕಿನಲ್ಲಿ ತಿರುಗಾಡಿದೆ; ಅಲ್ಲಿಯ ಪೋಲೀಸರು ಪ್ರತಿಯೊಂದು ಸಲವೂ ಹಾದಿಯಲ್ಲಿ ವ್ಯಾನ್ ತೆಗೆದುಕೊಂಡು ಬರುವುದು, ಯಾವ ಕಡೆ ಹೋಗುತ್ತಾ ಇದ್ದೀವೆ ಅಂತ ನೋಡುವುದು, ಬಂದ ತಕ್ಷಣ ಅವರನ್ನು ಕರೆಸಿ ಅವರನ್ನು

ಹೆದರಿಸುವುದು, ಪೋಲೀಸ್ ಠಾಣೆಯಲ್ಲಿ ಕೂಡಿಸುವುದು, ಅಷ್ಟೇ ಅಲ್ಲ ಮನೆ ತಪಾಸು ಮಾಡುವುದು ಕೇಸು ಹಾಕುವುದು ಈ ಪ್ರಕಾರ ಅನೇಕ ರೀತಿಯಿಂದ ಹಿಂಸೆ ಮಾಡಿದ್ದಾರೆ. ಪ್ರಜಾಪ್ರಭುತ್ವ ಆಡಳಿತದಲ್ಲಿ, ಜನಗಳಿಗೆ ಎಲ್ಲ ರೀತಿಯಿಂದ ಇರತಕ್ಕ ಹಕ್ಕುಗಳನ್ನೂ ಅವರು ಮೊಟಕು ಮಾಡಿ, ಬಹಳ ಕೆಟ್ಟ ರೀತಿಯಿಂದ ನಡೆದುಕೊಂಡಿದ್ದರೆ, ಆದರ ಸಲುವಾಗಿ ಮೈಸೂರು ಮುಖ್ಯ ಮಂತ್ರಿಗಳಾಗಲಿ, ಸರ್ಕಾರವಾಗಲಿ, ತಾವಾಗಿಯೇ, ಮಹಾರಾಷ್ಟ್ರ ಸರ್ಕಾರವಾಗಲಿ, ಕೇಂದ್ರಸರ್ಕಾರವಾಗಲಿ ಯಾವ ರೀತಿಯ ಒಂದು ಪ್ರತಿಬಂಧ ಮಾಡಬೇಕಾಗಿತ್ತೊ, ಅದನ್ನು ಮಾಡಲಿಲ್ಲ. ಅವರ ಸಲುವಾಗಿ ಈ ಸರ್ಕಾರದವರು ಈ ತರಹ ಇಷ್ಟು ದೊಡ್ಡ ಪ್ರಮಾಣದ ಹಕ್ಕನ್ನು ರಕ್ಷಣೆ ಮಾಡದೇ ಇರುವುದರಿಂದ ನೂರಾರು ಕೋಟಿ ರೂಪಾಯಿಗಳನ್ನು ವಿನಾಕಾರಣ ವೆಚ್ಚ ಮಾಡುವುದಕ್ಕೆ ಅವರಿಗೆ ಏನೇನೂ ಅಧಿಕಾರವಿಲ್ಲ ಎಂದು ಬಹಳ ವಿಶಾದದಿಂದ ಹೇಳಬೇಕಾಗಿದೆ. ಮೊದಲು ಕರ್ನಾಟಕದ ಹಿತರಕ್ಷಣೆ ಮಾಡಬೇಕಾದ ಸಮಯದಲ್ಲಿ ಸರ್ಕಾರ ಆದನ್ನು ಮಾಡಲಿಲ್ಲ—ಇದು ಒಂದನೆಯ ಅಂಶ, ಎರಡನೆಯ ಅಂಶ ಎಂದರೆ ಡಿವಿಜನಲ್ ಕಮೀಷನರುಗಳು 4 ಜನರು ಇದ್ದಾರೆ, ಆ ಹುದ್ದೆಯನ್ನು ರದ್ದುಮಾಡಬೇಕೆಂದು ಈ ಸಭೆಯಲ್ಲಿ ಎಷ್ಟೋ ಜನರು ಕೇಳಿಕೊಂಡಿದ್ದಾರೆ, ಇಲ್ಲಿಯವರೆಗೂ ಯಾವರೀತಿಯಿಂದಲೂ ಕ್ರಮ ತೆಗೆದುಕೊಂಡಿಲ್ಲ, ಆ ವಿಷಯದಲ್ಲಿ ತೀವ್ರವಾಗಿ ಕ್ರಮತೆಗೆದುಕೊಳ್ಳಬೇಕೆಂದು ಹೇಳಿ ಸರ್ಕಾರದವರಿಗೆ ವಿನಂತಿ ಮಾಡುತ್ತಾ ಇದ್ದೇನೆ.

ಇನ್ನೊಂದು ವಿಷಯ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಒಂದು ಮಾತು ಹೇಳಿದರು. The present rules and conditions of service of government employees ಬಗ್ಗೆ ಹೇಳುತ್ತಾ ಇದರಲ್ಲಿ ಎಷ್ಟೋ ಲೂಪ್ ಹೋಲ್ಸ್ ಇವೆ, ಅವರಲ್ಲಿ ಪ್ರಾಮಾಣಿಕತೆ ಇಲ್ಲ, ಅವರಲ್ಲಿ ಅಶಿಸ್ತು ಇದೆ ಎಂದು ಸ್ಪಷ್ಟವಾಗಿ ಗೊತ್ತಿದ್ದರೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮಗೆ ಬಹಳ ತೊಂದರೆ ಇದೆ ಇಂದು ಬಹಳ ವಿಷಾದದಿಂದ ಹೇಳಿದರು. ಇಲ್ಲಿಯವರೆಗೂ ಅವರು ಅಧಿಕಾರದಲ್ಲಿದ್ದು ಸಾಮಾನ್ಯ 6 ವರ್ಷ ಆಯಿತು, ಮೊದಲು ಒಂದು ಸಾರಿ ಇದ್ದರು, ಈ ಕಾಂಗ್ರೆಸ್ ಸರ್ಕಾರ ಮೈಸೂರು ಸಂಸ್ಥಾನದಲ್ಲಿ ಆಳುತ್ತಾ ಇದ್ದು ಸಾಮಾನ್ಯವಾಗಿ 15 ವರ್ಷ ಆಯಿತು, ಇಷ್ಟು ಕಾಲ ಇಂಡಿಸಿಪ್ಲಿನ್ ಮತ್ತು ಡಿಸ್‌ಆನೆಸ್ಟ್ ಆಫೀಸರುಗಳಿಗೆ ಪನಿಷ್‌ಮೆಂಟ್ ಕೊಡುವುದಕ್ಕೆ ಸರ್ವೀಸ್ ರೂಲ್ಸ್‌ನಲ್ಲಿ ತೊಂದರೆ ಇದೆ, ರೂಲ್ಸ್ ಸರಿಯಾಗಿಲ್ಲ ಎಂದು ತಿಳಿದಿದ್ದರೂ ಸಹಿತ, ಅದಕ್ಕೆ ಬೇಕಾದ ಹೊಸ ರೂಲ್‌ಗಳನ್ನು ಮಾಡದೇಇರುವುದಕ್ಕೆ ಕಾರಣವೇನು ? ಹೊಸ ರೂಲ್‌ಗಳನ್ನು ಫ್ರೇಂ ಮಾಡಬೇಕಾಗಿತ್ತು, ಅದಕ್ಕೆ ಅವಕಾಶವಿಲ್ಲದೇ ಇದ್ದರೆ ಕಾನ್ಸಿಟ್ಯೂಷನ್ ತಿದ್ದುಪಡಿ ಮಾಡಬೇಕಾಗಿದ್ದರೆ ಅದನ್ನು ಕೇಂದ್ರಸರ್ಕಾರದವರಿಗೆ ತಿಳಿಸಬೇಕಾಗಿತ್ತು. ಅನೇಕವೇಳೆ ಚೀಫ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಆಗುತ್ತಾ ಇರುತ್ತದೆ, ಆ ಕಾನ್‌ಫರೆನ್ಸ್‌ನಲ್ಲಿ ಇಂತಹ ತೊಂದರೆ ಇದೆ ಎಂಬುದನ್ನು ಕೇಂದ್ರಸರ್ಕಾರದವರಿಗೆ ತಿಳಿಸಿ ಅಲ್ಲಿ ತಿದ್ದುಪಡಿಯನ್ನು ಪಡೆದುಕೊಂಡು ಈ ರೂಲ್ಸ್‌ನ್ನು ಭದ್ರವಾಗಿ ಮಾಡಬೇಕಾಗಿತ್ತು. ಹಾಗೆ ಮಾಡದೇ ಇರುವುದರಿಂದ ಆಡಳಿತ ಇಷ್ಟು ಶಿಥಿಲವಾಗುತ್ತಿದೆ ಮತ್ತು ಸಡಿಲವಾಗುತ್ತಿದೆ. ನಾವು ನೋಡುತ್ತಾ ಇದ್ದೇವೆ ಹದಿನೈದು ವರ್ಷದಿಂದ, ತಪ್ಪು ಮಾಡಿದವರಿಗೆ ಶಿಕ್ಷೆ ಆಗುವುದಿಲ್ಲ, ತಪ್ಪು ಮಾಡಿದವರಿಗೆ ಯಾವ ಒಂದು ಶಿಕ್ಷೆ ಆಗಬೇಕೋ ಅದು ಆಗಬೇಕು. ಆದರ ಸಲುವಾಗಿ ಸರ್ಕಾರ ಇಷ್ಟು ಹಣ ಖರ್ಚು ಮಾಡಿ, ಜನರ ಕಿಸೆಯಲ್ಲಿರತಕ್ಕ ದುಡ್ಡನ್ನು ತೆಗೆದುಕೊಂಡು ಮನಸ್ಸಿಗೆ ಬಂದ ರೀತಿಯಲ್ಲಿ ಖರ್ಚು ಮಾಡಿ ಅವರ ಲೈಫ್ ಅಂಡ್ ಪ್ರಾಪರ್ಟಿಗೆ ಸರಿಯಾದ ರಕ್ಷಣೆ ಮಾಡುವಂತಹುದು ಸರಿಯಾಗಿ ಇಲ್ಲದೇ ಇದ್ದರೆ ಈ ಸರ್ಕಾರ ಇರುವುದಕ್ಕೆ ಏನೇನೂ ಅಧಿಕಾರ ಇಲ್ಲ ಎಂದು ನಾನು ವಿಷಾದದಿಂದ ಹೇಳುತ್ತಾ ಇದ್ದೇನೆ. ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri S. S. SHETTAR.—Mr. Speaker Sir, the Hon'ble Finance Minister was pleased to circulate a circular as a measure of economy. The Finance Minister was pleased to cancel certain posts to the extent of Rs. 2 lakhs. But we are not finding any such reduction in the Appropriation Bill. So, to that extent, reduction should be shown in the Bill.

Mr. SPEAKER.—There is a fallacy in what Sri Shettar says. The budget was prepared long back. The Government is indicating some economy now. I called for it and read it myself. He may kindly read it and

(MR. SPEAKER)

then he will understand what it is. It is stated that it is only tentative and when it is finalised another order will have to be issued. Till that is done nothing is final. The order shows, how seriously the Government is thinking about economising and trying to save money for agriculture or any other important industry. Therefore it is not a final order, and it is purely a tentative order.

ಶ್ರೀ ಕೆ. ರತ್ನಕುಮಾರ ಶೆಟ್ಟಿ (ಮೂಡಬಿದ್ರೆ).—ಮಾನ್ಯ ಅಧ್ಯಕ್ಷರೇ, ಇಂದಿನ ಅಪ್ರೋಪ್ರಿಯೇಷನ್ ಬಿಲ್ಲನ್ನು ಖಂಡಿಸುತ್ತಾ ನಮ್ಮ ರಾಜ್ಯದ ಒಂದು ಬರ್ನಿಂಗ್ ಪ್ರಾಬ್ಲಮ್ ಆಗಿರತಕ್ಕ ಭೂಸುಧಾರಣೆಯ ವಿಚಾರದಲ್ಲಿ ಕೆಲವು ವಾದಗಳನ್ನು ಹೇಳಬಚ್ಛಿಸುತ್ತೇನೆ. ಭೂ ಸುಧಾರಣೆ ಈಗ ಉರಿಯುತ್ತಿರುವ ಒಂದು ದೊಡ್ಡ ಸಮಸ್ಯೆಯಾಗಿದೆ. ಸರ್ಕಾರದವರು ಶೀಘ್ರವೇ ಅದಕ್ಕೆ ಸರಿಯಾದ ಒಂದು ಕಾರ್ಯಕ್ರಮವನ್ನು ಕೈಕೊಂಡು ಸರಿಯಾದ ಪರಿಹಾರವನ್ನು ಅವರಿಗೆ ತೋರಿಸಿಕೊಡಬೇಕೆಂದು ತಮ್ಮ ಮೂಲಕ ಹೇಳಿಕೊಳ್ಳುತ್ತೇನೆ. ಭೂ ಸುಧಾರಣೆ ಬಗ್ಗೆ ನಮ್ಮ ಈ ಸ್ವಾತಂತ್ರ್ಯದ ಸಮಯದಲ್ಲಿ ಕಾಂಗ್ರೆಸ್ ಪಕ್ಷದವರು ಯಾವ ರೀತಿಯಲ್ಲಿ ಘಟನೆ ಮೂಲಕ ಪ್ರಜೆಗಳಿಗೆ ಆಶ್ವಾಸನೆಯನ್ನು ಕೊಟ್ಟಿದ್ದರೋ ಅದನ್ನು ಮಾಡದೆ, ಪ್ರಜೆಗಳನ್ನು ಮರೆತು, ತಾವು ಕೊಟ್ಟ ಆಶ್ವಾಸನವನ್ನು ಮರೆತು ವಿಶ್ವಾಸಘಾತಕ ಮಾಡಿದ್ದಾರೆ. ಅವರ ತತ್ವವನ್ನು ಅವರು ಬಿಟ್ಟಿದ್ದರೂ, ಅವರು ಘಟನೆಯ ಮೂಲಕ ಕೊಟ್ಟಿರುವ ಆಶ್ವಾಸನಕ್ಕೆ ಮನ್ನಣೆ ಕೊಟ್ಟು ಜನರು ಕಾಂಗ್ರೆಸ್ ಪಕ್ಷವನ್ನು ಒಪ್ಪಿಕೊಂಡು ಅದಕ್ಕೆ ಬೆಂಬಲ ಕೊಟ್ಟಿದ್ದಾರೆ. ಭೂ ಸುಧಾರಣೆಯ ನೆಪದಿಂದ ಘಟನೆಯನ್ನು ತಿದ್ದುಪಡಿ ಮಾಡಿ ಈಗ ಮೂಲಭೂತವಾದ ಹಕ್ಕುಗಳಿಗೆ ಧಕ್ಕೆ ತಂದಿದ್ದಾರೆ, ಅದು ಮಾತ್ರವಲ್ಲದೇ ಈ ದೇಶದ ಒಂದು ಸಮಾಜಕ್ಕೆ ಅದರಿಂದ ಪೆಟ್ಟು ಬಿದ್ದಿದೆ. 1957ನೇ ಇಸವಿಯಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಮಾನ್ಯ ಜತ್ತಿಯವರು ಈ ವಿಷಯವಾಗಿ ಒಂದು ರಿಪೋರ್ಟನ್ನು ಅರ್ಪಿಸಿದರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ವಿಚಾರ ಹೇಳುವುದಾದರೆ ಅಲ್ಲಿಯವರೆಗೂ ಧಣಿ ಒಕ್ಕಲುಗಳು ಒಂದು ತಾಯಿಮಕ್ಕಳಂತೆ ಕಷ್ಟಸುಖದಲ್ಲಿ ಭಾಗಿಗಳಾಗಿ ಉತ್ತಮ ರೀತಿಯಲ್ಲಿ ಜೀವನ ನಡೆಸುತ್ತಾ ಇದ್ದರು. ಯಾವಾಗ ಈ ಭೂ ಸುಧಾರಣೆ ಕಾನೂನು ಬಂದಿತೋ ಅಂದಿನಿಂದ ಒಕ್ಕಲು, ಧಣಿ ಇವರುಗಳಲ್ಲಿ ಸಾಮರಸ್ಯವಿಲ್ಲದೆ ಕೃಷಿಗಾರರ ಕೆಲಸ ಅವನತಿಗೆ ಬಂದದ್ದರಿಂದ ಆಹಾರದ ಅಭಾವ ಉಂಟಾಯಿತು. ಕೃಷಿ ಮಾಡುತ್ತಾ ಇದ್ದ ಒಕ್ಕಲುಗಳು ತಮ್ಮ ಕೃಷಿ ಮಾಡುವ ಉತ್ತೇಜನವನ್ನು ಕಳೆದುಕೊಂಡರು, ತಮಗೆ ಭೂಮಿ ಸಿಕ್ಕುತ್ತದೆ ಎಂಬ ನೆಪದಿಂದ ತಮ್ಮ ನಿಜವಾದ ಕರ್ತವ್ಯವನ್ನು ಬಿಟ್ಟು ಭೂಮಿಯನ್ನು ಪಡೆದುಕೊಳ್ಳಬೇಕೆಂಬ ಆಸೆಯಿಂದ ಕೋರ್ಟುಗಳಿಗೆ ಹತ್ತತೊಡಗಿದರು, ಗೇಣಿ ಬಾಕಿಗಾಗಿ ಧಣಿಗಳು ಕೋರ್ಟಿಗೆ ಹೋಗಬೇಕಾದ ಪ್ರಸಂಗ ಬಂದು ಧಣಿಗಳಲ್ಲಿ ಒಕ್ಕಲುಗಳಲ್ಲಿ ವೈಮನಸ್ಯ ಜಾಸ್ತಿಯಾಯಿತು ಗೇಣಿ ಬಾಕಿಗೆ ಒಕ್ಕಲುಗಳ ಬೆಳೆ, ಮನೆ ಸೊತ್ತು ಜಪ್ತಿ ಆದುವು, ಎಷ್ಟೋ ಒಕ್ಕಲೆಬ್ಬಿಸಿಹೋದರು. 1962ನೇ ಇಸವಿಯಲ್ಲಿ ಒಕ್ಕಲು ಎಬ್ಬಿಸಬಾರದು ಎಂಬುದಾಗಿ ಒಂದು ತಡೆ ಆಜ್ಞೆಯನ್ನು ಸರ್ಕಾರದವರು ಕೊಟ್ಟರು, ತಾತ್ಕಾಲಿಕವಾಗಿ ಒಕ್ಕಲು ಎಬ್ಬಿಸಬಾರದು ಎಂದು ಮಾಡಿದ್ದರಿಂದ ಆಗಲೂ ಸಹ ಕೃಷಿ ಮಾಡಿದರೆ ಗೇಣಿ ಬಾಕಿಗೆ ಬೆಳೆ ಜಪ್ತಿ ಮಾಡುತ್ತಾರೆ, ಭೂಮಿ ತಮಗೆ ಸಿಕ್ಕುತ್ತದೆ ಎಂಬ ನೆಪದಿಂದ ಎಷ್ಟೋ ಕಡೆ ಗದ್ದೆಗಳನ್ನು ಒಕ್ಕಲುಗಳು ಕೃಷಿ ಮಾಡದೇ ಹಾಗೆಯೇ ಉಳಿಸಿಕೊಂಡರು.

ಮಂಗಳೂರಿನ ಪೆಟ್ಲೆಂಟ್ ಪೇಟೆಯಲ್ಲಿ ಹಿಂದೆ ಕಾಂಗ್ರೆಸ್ ಸೆಷನ್ 1963-64ರಲ್ಲಿ ನಡೆಯಿತು. ಆವಾಗ ಕಾಂಗ್ರೆಸ್ ಪಕ್ಷದವರೇ ಅರ್ಪಿಸಿದ ಮನವಿ ಪ್ರಕಾರ ಆ ಸಮಯದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 50 ಸಾವಿರ ಮುಡಿ ಅಕ್ಕಿ ಗೇಣಿ ಬರತಕ್ಕ—ಅಂದ್ರೆ 2 ಲಕ್ಷ ಮುಡಿ ಬೆಳೆಯುವ ಜಮೀನು ಹಡ್ಲು ಬಿದ್ದಿತ್ತು. ಅಷ್ಟು ಜಮೀನಿನಲ್ಲೂ ಬೆಳೆ ಇಲ್ಲದೆ ಅದು ಪಾಳುಬಿದ್ದಿದೆ. ಅದನ್ನು ಸಾಗುವಳಿಗೆ ಬಿಡಿಸಿಕೊಡಬೇಕು ಎಂದು ಸರ್ಕಾರಕ್ಕೆ ಅನೇಕ ಮನವಿಗಳನ್ನು ಮಾಡಿಕೊಂಡಿದ್ದಾಯಿತು. ಅನೇಕಾವರ್ತಿ ಇಲ್ಲಿಗೆ ಬಂದು ತಿಳಿಸಿದ್ದೂ ಆಯಿತು. ಆದರೆ ಆ ಜಮೀನಿನ್ನೂ ಹಾಗೆ ಹಡ್ಲು ಬಿದ್ದಿದೆ. ಒಕ್ಕಲು—ದಣಿಗಳ ಮಧ್ಯೆ ವ್ಯಾಜ್ಯ ಉಂಟಾಗಿ ಇಂದಿನವರೆಗೂ ಆ ಭೂಮಿ ಸಾಗುವಳಿಯಾಗುತ್ತಿಲ್ಲ. ಸರ್ಕಾರದವರು ಯಾವ ಒಂದು ಕಾರ್ಯಕ್ರಮವನ್ನೂ ಕೈಗೊಳ್ಳದೆ ಸುಮ್ಮನೆ ಇದ್ದಾರೆ. ಈ ದಿವಸ ಯಾವ ಒಕ್ಕಲು ಅಷ್ಟು ಭೂಮಿಯನ್ನು ಬಂಜರ್ ಬಿಟ್ಟಿದ್ದಾನೋ ಅವನ ಬಗ್ಗೆ ಶೀಘ್ರವಾಗಿ ಉಗ್ರಕ್ರಮ ಕೈಗೊಂಡು ಅವನಿಗೆ ಕ್ರೂರ ಶಿಕ್ಷೆ ವಿಧಿಸಬೇಕೆಂದು ಹೇಳುತ್ತೇನೆ. ಮಾತ್ರವಲ್ಲದೆ ಈ ದಿವಸ ಸರ್ಕಾರದವರು ಜಮೀನ್ದಾರರಿಗೆ ಲೆವಿ ಕೊಡಬೇಕು, ಕಂದಾಯ ಕೊಡಬೇಕು, ಸರ್‌ಛಾರ್ಜ್ ಕೊಡ

ಬೇಕು, ಒಕ್ಕಲನ್ನು ಎಬ್ಬಿಸಬಾರದು, ಡಿಕ್ರಿ ಆಗಬಾರದು, ಶ್ಯಾನುಭೋಗರನ್ನು ತೆಗೆಯಬೇಕು ಮತ್ತು ಕೃಷಿಯನ್ನು ಜಾಸ್ತಿಮಾಡಬೇಕು, ಎಂದು ಇಷ್ಟೆಲ್ಲಾ ಹೇಳುತ್ತಾ, ಇನ್ನೊಂದು ಕಡೆ ಎಷ್ಟು ಜಮೀನಾದರೂ ಹಡ್ಕು ಬಿದ್ದಿರಬಹುದು ಎನ್ನುವ ತತ್ವ ಏನಿದೆ ಅದನ್ನು ನಾನು ಒಪ್ಪುವುದಿಲ್ಲ. ಈ ದಿವಸ ಸರ್ಕಾರದವರು ಭೂ ಸುಧಾರಣೆ ಕಾನೂನನ್ನು ಜಾರಿಗೆ ತಂದು ಉಳುವವನೇ ಹೊಲದ ಒಡೆಯನಾಗಬೇಕು, ಎನ್ನುವ ತತ್ವ ಹೇಳುತ್ತಿದ್ದರೆ ಈ ದಿವಸ ಚಾಲುಗೇಣಿ ಒಕ್ಕಲೇನಿದ್ದಾನೆ ಅವನು ಉಳುವವನಲ್ಲವಂತೆ. ಅವನು ತನ್ನ ಕೈಕೆಳಗೆ ದಿನಕೂಲಿಗಳನ್ನಿಟ್ಟುಕೊಂಡು ಕೆಲಸಮಾಡುತ್ತಿದ್ದಾನೆ. ಈ ಚಾಲುಗೇಣಿದಾರರನ್ನು ಎಬ್ಬಿಸಲು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ಕ್ರಿಮಿನಲ್ ಕೇಸುಗಳು ನಡೆಯುತ್ತಿವೆ. ಉಳುವವನೆ ಹೊಲದೊಡೆಯನಾಗಬೇಕು, ಎನ್ನುವಾಗ ಹಾಗೇ ತೋಟಗಳಲ್ಲಿ ಕೆಲಸಮಾಡತಕ್ಕ ಕೆಲಸಗಾರ ಏಕೆ ಆ ತೋಟದ ಮಾಲೀಕನಾಗಬಾರದು? ಬ್ಯಾಂಕುಗಳಲ್ಲಿ ಕೆಲಸಮಾಡತಕ್ಕ ನೌಕರರು ಏಕೆ ಆ ಬ್ಯಾಂಕಿನ ಒಡೆಯರಾಗಬಾರದು? ಕಾರ್ಖಾನೆಗಳಲ್ಲಿ ಕೆಲಸಮಾಡತಕ್ಕ ಕಾರ್ಮಿಕರೇಕೆ ಆ ಕಾರ್ಖಾನೆಗಳ ಒಡೆಯರಾಗಬಾರದು? ಇವರೆಲ್ಲರನ್ನೂ ಏಕೆ ಒಡೆಯರನ್ನಾಗಿ ಮಾಡಬಾರದೆಂದು ನಾನು ಈ ಒಂದು ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇನೆ? ಮಾತ್ರವಲ್ಲದೆ ಈ ದಿವಸ ಕೆಲವರು ತಾವು ದುಡಿದ ದುಡಿಮೆಯನ್ನು ಅಂದರೆ ಹಣವನ್ನು ಕೈಗಾರಿಕೆಗಳ ಮೇಲೆ ಹಾಕಿದ್ದಾರೆ, ಇನ್ನು ಕೆಲವರು ತಮ್ಮ ಹಣವನ್ನು ತೋಟಗಾರಿಕೆ ಮೇಲೆ ಹಾಕಿದ್ದಾರೆ, ಇನ್ನು ಕೆಲವರು ತಮ್ಮ ಹಣವನ್ನು ವಿದ್ಯೆಯ ಮೇಲೆ ಹಾಕಿದ್ದಾರೆ, ಕೆಲವರು ವ್ಯಾಪಾರದ ಮೇಲೆ ಹಾಕಿದ್ದಾರೆ. ಅದೇ ರೀತಿಯಾಗಿ ಈ ದಿವಸ ಇರತಕ್ಕ ಜಮೀನ್ದಾರರೂ ತಮ್ಮ ಹಣವನ್ನು ಭೂಮಿಯ ಮೇಲೆ ಹಾಕಿದ್ದಾರೆ. ಆದರೆ ಈ ದಿವಸ ಕಾನೂನು ಪ್ರಕಾರ ದೊಡ್ಡ ಧಕ್ಕೆ ಇರುವುದು ಈ ಒಬ್ಬ ಜಮೀನ್ದಾರನಿಗೆ ಮಾತ್ರ; ಈ ಒಂದು ಜಮೀನ್ದಾರಿ ವರ್ಗಕ್ಕೆ ಮಾತ್ರ. ಆದರೆ ಸ್ವತಂತ್ರ ಪಕ್ಷದವರು ಮೂಲ ಗೇಣಿ ಮತ್ತು ನ್ಯಾಯಗೇಣಿಯ ಮೇಲೆ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ಈ ದಿವಸ ಮಾಡಿರತಕ್ಕ ಭೂ ಸುಧಾರಣೆ ಸರಿಯಾಗಿಲ್ಲ. ಇದನ್ನು ಕೂಡಲೇ ಸರಿಮಾಡಬೇಕು. ಈಗ ಇರತಕ್ಕದ್ದು ಬಹಳ ಅಸ್ತವ್ಯಸ್ತವಾಗಿದೆ; ಇದರಿಂದ ಕೃಷಿಗೆ ಬಹಳ ಬಾಧಕವುಂಟಾಗಿದೆ. ಇದನ್ನೆಲ್ಲಾ ಸರಿಪಡಿಸಲು ಶೀಘ್ರವಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅದಕ್ಕಾಗಿ ಕೂಡಲೇ ಒಬ್ಬ ನ್ಯೂ ಕಮಿಷನರನ್ನು ಅಪಾಯಿಂಟ್ ಮಾಡಿಕೊಳ್ಳಬೇಕು. ಅವರು ಪ್ರತಿಯೊಂದು ಭಾಗಕ್ಕೂ ಹೋಗಿ ಅಲ್ಲಿ ಯಾವ ರೀತಿ ಕೃಷಿಯಾಗುತ್ತಿದೆ, ಜಮೀನುಗಳು ಯಾವ ರೀತಿ ಇವೆ, ಅಲ್ಲಿ ಜಮೀನುಗಳ ಬೆಲೆ ಏನಿದೆ ಇತ್ಯಾದಿ ವಿವರಗಳನ್ನೆಲ್ಲಾ ಸಂಗ್ರಹಿಸಿ ಅದಕ್ಕೆ ತಕ್ಕಂತೆ ಸೂಕ್ತ ಬದಲಾವಣೆಗಳನ್ನು ಮಾಡಲು ಕಾರ್ಯಕ್ರಮ ಕೈಗೊಳ್ಳಬೇಕು. ಮಾತ್ರವಲ್ಲದೆ ಈ ದಿವಸ ಭೂ ಮಾಲೀಕರಿಗೆ ಕೊಟ್ಟಿರತಕ್ಕ 28 ಎಕರೆ ಭೂಮಿಯೇನಿದೆ ಅದನ್ನು ಒಂದೇಕಡೆ ಕಾಂಪ್ಯಾಕ್ಟಾಗಿ ಕೊಡಬೇಕು. ಅರ್ಧಾಂಶವನ್ನು ಒಕ್ಕಲಿಗೆ ಕೊಡಬೇಕೆಂಬ ನೆಪ ಹಾಕಿ ಭೂ ಮಾಲೀಕರಿಗೆ ಬೇರೆ ಬೇರೆ ಜಾಗದಲ್ಲಿ ಭೂಮಿಯನ್ನು ಕೊಡಬಾರದು. ಅವರಿಗೆ ಒಟ್ಟಿಗೆ ಒಂದೇಕಡೆ ಭೂಮಿಯನ್ನು ಅಂದರೆ ಆ 28 ಎಕ್ರೆಗಳನ್ನೂ ಕೊಡಬೇಕು. ವಿಧವೆಯರು, ಮೈನರ್ ಮಕ್ಕಳು, ಎಂಡೋಮೆಂಟ್ ಭೂಮಿಗಳನ್ನು ಗೇಣಿಗೆ ಕೊಡಬಹುದು ಎಂಬ ನ್ಯಾಯಬೇಡ. ಧಣಿ ಒಕ್ಕಲು ಎಂಬುವುದು ಸಂಪೂರ್ಣ ನಾಶವಾಗಬೇಕು. ಧಣಿಗಳಿಗೆ ಭೂಮಿಗೆ ಬದಲಾಗಿ ಪರಿಹಾರ ಕೊಡತಕ್ಕ ಸಂದರ್ಭಗಳಲ್ಲಿ ಅವರಿಗೆ ಸಂಪೂರ್ಣ ಹಣವನ್ನು ಪಾವತಿ ಮಾಡಬೇಕು. ಸರ್ಕಾರದವರಲ್ಲಿ ಹಣವಿಲ್ಲವೆಂಬ ನೆಪ ಹಾಕಬಾರದು ರಾಜ್ಯ ಸರಕಾರದಲ್ಲಿ ಹಣವಿಲ್ಲವೆಂದರೆ ಕೇಂದ್ರ ಸರ್ಕಾರದಿಂದ ಹಣವನ್ನು ತಂದು ಅವರಿಗೆ ಕೊಡಬೇಕು, ಇಲ್ಲವೇ ಹಿಂದೆ ಅರ್ಥಿಕ ಸಚಿವರು ಹೇಳಿದಂತೆ ಡಿಫಿಸಿಟ್ ಬಡ್ಜೆಟ್ಟಾದರೂ ಚಿಂತೆಯಿಲ್ಲ ಈ ಭೂ ಮಾಲೀಕರಿಗೆ ಕೂಡಲೆ ಹಣವನ್ನು ಕೊಡಬೇಕು. ಇಲ್ಲವಾದರೆ ಅಮೇರಿಕಾದಿಂದ ಬಂದಿರತಕ್ಕ ಪಿ. ಎಲ್. 480ರಲ್ಲಿ ವಿಶೇಷ ಹಣ ಇದೆ. ಅವರನ್ನು ಭೇಟಿಮಾಡಿ ಅವರಿಂದ ಹಣವನ್ನು ಸಾಲವಾಗಿ ಪಡೆದು, ಅವರಿಗೆ 20 ವರ್ಷಗಳ ಕಂತುಗಳಲ್ಲಿ ಪಾವತಿ ಮಾಡಿ ಅದರಲ್ಲಿಯಾದರೂ ಕೊಡಬೇಕೆಂದು ಹೇಳುತ್ತೇನೆ. ಜಮೀನುದಾರರು ಈ ಪರಿಹಾರ ದ್ರವ್ಯವು ಸಿಕ್ಕಿದರೆ ಅದನ್ನು ಅವರು ಬೇರೆ ಉದ್ಯೋಗಗಳಲ್ಲಿ ಇನ್‌ವೆಸ್ಟ್ ಮಾಡಿ ಜೀವನ ಮಾಡಿಕೊಳ್ಳಬಹುದು. ಬೇರೆ ಉದ್ಯೋಗಗಳನ್ನು ಅವರು ನಿರ್ಮಾಣಮಾಡಿಕೊಳ್ಳಬಹುದು. ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವುದಾದರೆ ಅವರನ್ನೆಲ್ಲಾ ಗುಂಡಿನದಾಯಿಗಿಟ್ಟುಕೊಂದುಬಿಡಿ; ಇಲ್ಲವೆ ಗುಂಡಿನ ಬಾಯಿಗೆ ಬಲಿಕೊಡಿ. ಇಲ್ಲವಾದರೆ ಈ ಜಮೀನ್ದಾರರನ್ನು ಕೆನಡಾದಂತಹ ಕೃಷಿಕರನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳಿಗೆ ಶ್ರಮಾರ್ಜನೆಗಾಗಿ ಕಳುಹಿಸಿಕೊಡಿ ಎಂದು ನಾವು ಮುಖ್ಯಮಂತ್ರಿಗಳು ದಕ್ಷಿಣಕನ್ನಡ ಜಿಲ್ಲೆಗೆ ಬಂದಿದ್ದಾಗ ಮನವಿ ಸಲ್ಲಿಸಿದಾಗ ಅವರು ಕೂಡಲೆ ಕ್ರಮ ಕೈಗೊಳ್ಳುವುದಾಗಿ ಭರವಸೆಯನ್ನು ಕೊಟ್ಟರು ಅವರ ಅಭಿಪ್ರಾಯದ ಪ್ರಕಾರ ಒಬ್ಬ ಶಾಸಕರ ಹೊರತು ದಕ್ಷಿಣಕನ್ನಡ ಜಿಲ್ಲೆಯ ಎಲ್ಲಾ ಶಾಸಕರು ಪಾರ್ಲಿಮೆಂಟ್ ಶಾಸಕರು ಸಮೇತ ರುಜು ಮಾಡಿದ ಮನವಿಯನ್ನು ಒಪ್ಪಿಸಿದೆವು. ಆದರೆ ಈ ದಿನ ಅದರಬಗ್ಗೆ ರೆವಿನ್ಯೂ ಇಲಾಖೆ ಅಡ್ಡಬರುತ್ತಿದೆ ಎಂಬ ನೆಪ ಹಾಕಿ ಕುಳಿತಿದ್ದಾರೆ. ಧಣಿ ಒಕ್ಕಲುಗಳಿಗೆ ಭೂಮಿ ಹಂಚುವ

(ಶ್ರೀ ಕೆ. ರತ್ನಕುಮಾರ ಶೆಟ್ಟಿ)

ದೆಂದರೆ ಹಿಂದಿನ ಕತೆಯಂತೆ ಎರಡು ಬೆಕ್ಕುಗಳಿಗೆ ಕೋತಿ ಬೆಣ್ಣೆ ಹಚ್ಚಿದಂತೆ ಇದು ಸರಿಯಾದ ಧೋರಣೆಯಲ್ಲ. ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಕೂಡಲೆ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ನನ್ನ ಹುಡುಗಾಟಿಕೆಯ ಮಾತಲ್ಲ, ಆದರೆ ಬಹಳ ದೊಡ್ಡ ಗಂಡಾಂತರವೇ ಆದೀತು ಎಂದು ಎಚ್ಚರಿಸುತ್ತೇನೆ. ಈ ಬಗ್ಗೆ ನನ್ನ ಅಸಮಾಧಾನವನ್ನು ಸೂಚಿಸಲು, ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ, ಮುಖ್ಯಮಂತ್ರಿಗಳ ಮತ್ತು ಸರ್ಕಾರದ ಈ ನೀತಿಯನ್ನು ಖಂಡಿಸುತ್ತ ಸಭಾತ್ಯಾಗ ಮಾಡುತ್ತೇನೆ.

Sri S. D. KOTHAVALE.—While supporting the Bill under consideration, I want to make a few remarks by way of reply to some of the points raised by the Hon'ble Member Mr. Gopala Gowda and to the references he made to my speech I made while speaking on the general discussion on the budget proposals. I said that the budget is a balanced one. His contention is that it is not balanced but it is a deficit budget. I think the view expressed by me was correct and I shall justify the position. Whether the budget is balanced one or not is to be considered with regard to the receipts on the revenue account and the expenditure on the account. That is the test to see whether the budget is balanced one or not. Here I may point out through you Sir to Mr. Gopala Gowda that the estimated receipts on the revenue accounts are of the order of Rs. 185.60 crores while our estimated expenditure on the revenue account is of the order of Rs. 177.01 crores leaving a surplus of Rs. 8.59 crores. Therefore, my Hon'ble brother will know that so far as our revenue account receipts and expenditure are concerned, our budget is a surplus one. It is not only balanced but it is a surplus one. It is with respect to that only that a budget is stated either surplus, deficit or balanced.

Now even taking into consideration the viewpoint expressed by Mr. Gopala Gowda, we have to consider also our anticipated receipt and expenditure on the capital account. I think the whole idea of capital account is to create assets and to meet the recurring expenditure which are in the nature of pensions, annuities and all that. So, expenditure that is made on the capital acoount should be considered for the purpose of finding whether it is a deficit budget or a surplus budget. The capital account is intended to create assets, and expenditure on that account adds to capital assets, and that is the position. Even in that respect. I may bring to his notice here that even including all the expenditure of the capital account, our deficit is only about Rs. 4 crores. The Hon'ble Finance Minister has indicated that the deficit is to be covered by economies in the administration. They have given thought to the matter and they have indicated certain lines on which they want to economise in the matter of expenditure in the the administrative services. That is one thing. Secondly, some fresh measures of taxation with regard to commercial taxes and with regard to agricultural income tax also are contemplated and we of course hope to receive certain sum of money from the measures which we have passed for the purpose of amending Prohibition Act. Therefore, if you

take all that into consideration, and in spite of the fact that the capital account expenditure leaves a deficit of four crores, that would be wiped out and there would be surplus also. Therefore, my remarks were well-justified when I said in my speech previously that our budget is a balanced one. Now, I can say it is even a surplus budget—not even a balanced budget.

4-00 P.M.

Sri Gopala Gowda expressed certain doubts with regard to the debt position and about our assets. If I can make a reference to the speech of the Hon'ble Finance Minister while introducing the Budget, he has already pointed out that our total debt position is 471.09 crores at the end of the current year and he has also indicated our position about assets which would stand at 516.65 crores at the end of the next year. That leaves a considerable balance at more than 30 crores. Here of c urse, it may be pointed out that out of the total debts that we owe either to the Centre or to the public or any other agency, we have advanced crores of rupees to the municipalities, to panchayets and to industries. If I am mistaken not, I am speaking subject to correction, it may not be about 80 crores. It may be of that order.

Sri H. D. DEVE GOWDA (Holenarsipur).—All irrecoverable debts !

Sri S. D. KOTHAVALE.—Debts are not irrecoverable. They cannot be considered to be irrecoverable. If the Hon'ble Member wants to suggest that debts are irrecoverable probably it may be an instigation to the debtors not to pay and some debts may become irrecoverable.

Sri H. D. DEVE GOWDA.—The Public Accounts Committee Report says that. Your own officers say that.

Sri S. D. KOTHAVALE.—I am at present, chairman of the Public Accounts Committee. I know what is said there. The Hon'ble Member should know the procedure about the Public Accounts Committee and the explanations given in the report.

The present position is, nearly 80 crores of rupees are advanced by way of loans to other municipalities, panchayats, cultivators and industries, which of course we shall recover and we are also entitled to recover interest on this money. Therefore, the real debt position is not as bad as it appear to be on paper. Instead of 477 crores it may be about 400 crores, in view of the fact that we are also creditors to the extent of 80 crores and we are entitled to recover not only capital, but also the interest.

One more point : I will just refer and finish Sir. Many of our assets are irrigation projects which are in operation. We have spent crores and crores of rupees and we want to spend more money on that. But these projects require time : they are time-consuming and they require time for repayment. It takes time to get return from them. Some irrigation works which are completed, will yield proper returns, and there is no difficulty in regard to the repayment of loans. Take for

(SRI S. D. KOTHAVALE)

instance the Sharavathi project. Every year, we shall be getting nearly 20 crores by way of return. Therefore, it cannot be said that that debt is not justified. Therefore, we should not be in haste to pronounce judgement like this. Our financial position is sound and though we are for the time being having a sort of crisis because we want to spend more money on the various development schemes, ultimately our financial position is sure to be restored to its normal health.

With these remarks, I support the Appropriation Bill.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೇ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಂದರ್ಭದಲ್ಲಿ ಇಲ್ಲಿ ಉತ್ತರ ಕೊಡುತ್ತಾ ಅವರು, ಬಹಳ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯ ಮಂತ್ರಿಗಳ ಪದವಿಯಲ್ಲಿರುವವರು ಅಸಹಾಯಕತೆಯನ್ನು ತೋರಿಸುವುದಾದರೆ ಈ ರಾಜ್ಯದ ಯೋಗಕ್ಷೇಮವನ್ನು ನೋಡಿಕೊಳ್ಳಲು ಈ ಹೊತ್ತು ಸರಕಾರದಲ್ಲಿ ಒಬ್ಬ ದಕ್ಷ ಮಂತ್ರಿ ಇಲ್ಲದೇ ಹೋಗಿದೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಕ್ಕೆ ಕೆಲವಾರು ನಿದರ್ಶನಗಳನ್ನು ಕೂಡ ಹೇಳಬಹುದು. ಆದರೆ ಈಗ ಆ ವಿಷಯಗಳನ್ನು ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಕಾಂಗ್ರೆಸ್ ಸರಕಾರದಲ್ಲಿ ಮುಖ್ಯ ಮಂತ್ರಿಗಳಾಗಿರುವವರು ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲವಾರು ಕೆಲಸಗಳನ್ನು ಧೈರ್ಯದಿಂದ ಮಾಡುವುದಾದರೆ ಈ ರಾಜ್ಯದ ಹಿತಸಾಧನೆಯಾಗುತ್ತದೆಯೇ ಹೊರತು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ ಎಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆಲವಾರು ಉಳಿತಾಯದ ಮಾರ್ಗಗಳನ್ನು ಸರಕಾರದವರು ಈಗಾಗಲೇ ಮಾಡಬೇಕೆಂದು ಯೋಚನೆಮಾಡಿ ಸುಮಾರು ಎರಡು ಕೋಟಿ ಚಿಲ್ಲರೆಯಷ್ಟು ಹಣ ಉಳಿತಾಯವಾಗಬಹುದು ಎಂದು ಮಾಡುತ್ತಿದ್ದಾರೆ. ಇದರ ಜೊತೆಗೆ ಇನ್ನೂ ಕೆಲವು ವಿಷಯಗಳನ್ನು ಇಲ್ಲಿ ಸರಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಸೆಕ್ರೆಟೇರಿಯಟ್‌ನಲ್ಲಿರತಕ್ಕ ಸೆಕ್ರೆಟರಿಗಳ ಸಂಖ್ಯೆಯನ್ನು ಎಂದರೆ ಇದರಲ್ಲಿ ಒಂದೆರಡನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ. ಮದ್ರಾಸಿನಲ್ಲಿ ಹಿಂದೆ ಇದ್ದುದಕ್ಕಿಂತ ಈಗ ಒಂದೆರಡು ಕಡಿಮೆ ಮಾಡಿದ್ದಾರೆಂದು ಕೇಳುತ್ತೇನೆ. ಆ ರೀತಿ ಇಲ್ಲೂ ಮಾಡಲು ಪ್ರಯತ್ನ ಮಾಡಬೇಕು. ಇನ್ನು ಚೀಫ್ ಎಲೆಕ್ಟೋರಲ್ ಆಫೀಸರು ಎನ್ನುವವರು ಪ್ರತ್ಯೇಕವಾಗಿ ಏಕೆ ಇರಬೇಕು ಎನ್ನುವುದು ನನಗೆ ಗೊತ್ತಾಗುವುದಿಲ್ಲ. ಯಾರಾದರೂ ಒಬ್ಬರು ಡೆಪ್ಯುಟೀ ಸೆಕ್ರೆಟರಿಗಳು ಇದನ್ನು ನೋಡಿಕೊಳ್ಳಬಹುದು. ಈ ಹುದ್ದೆಯನ್ನು ರದ್ದು ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಚೀಫ್ ಇಂಜನೀಯರು, ಸೂಪರಿಂಟೆಂಡಿಂಗ್ ಇಂಜನೀಯರು ಹಾಗೂ ಎಕ್ಸಿಕ್ಯೂಟೀವ್ ಇಂಜನೀಯರುಗಳು ಇವೊತ್ತು ಕೆಲವರು ಸೆಕ್ರೆಟೇರಿಯಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡುವುದು ಅನಾವಶ್ಯಕ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಚೀಫ್ ಇಂಜನೀಯರಾಗಿರುವವರು ಯಾವಾಗ ಒಂದು ಶಿಫಾರಸನ್ನು ಮಾಡಿ ಸರಕಾರಕ್ಕೆ ಕಳುಹಿಸುತ್ತಾರೋ ಅದನ್ನು ಸರಕಾರದವರು ಸ್ಯಾಂಕ್ಷನ್ ಮಾಡುವುದೇ ಮುಖ್ಯ. ಒಬ್ಬರು ಚೀಫ್ ಇಂಜನೀಯರು ಮಾಡಿರುವ ಶಿಫಾರಸುಗಳನ್ನು ಪುನಃ ಇನ್ನೊಬ್ಬ ಚೀಫ್ ಇಂಜನೀಯರಾಗಿರುವವರು ಪರಿಶೀಲನೆ ಮಾಡಿ ಅದು ನ್ಯಾಯವಾಗಿಲ್ಲ ಎಂದು ತೀರ್ಮಾನ ಕೊಡುವುದು ಅವಶ್ಯಕವಿಲ್ಲ. ಒಂದು ಸಾರಿ ಚೀಫ್ ಇಂಜನೀಯರಾಗಿರುವವರು ತೀರ್ಮಾನ ಕೈಗೊಂಡ ಮೇಲೆ ಅದನ್ನು ಸರಕಾರದವರು ಮಂಜೂರು ಮಾಡಬೇಕು ಅಥವಾ ಅದನ್ನು ನೋಡಿ ಮಂಜೂರು ಮಾಡದೇ ಇರಬಹುದು. ಇಷ್ಟು ಮಾತ್ರ ಅಧಿಕಾರ ಸರಕಾರಕ್ಕೆ ಇರಬೇಕು. ಚೀಫ್ ಇಂಜನೀಯರು ಒಂದು ಸಾರಿ ಚೆನ್ನಾಗಿ ಪರಿಶೀಲನೆ ಮಾಡಿ ತೀರ್ಮಾನ ಮಾಡಿ ಸರಕಾರಕ್ಕೆ ನ್ಯಾಯವಾದ ಶಿಫಾರಸುಗಳನ್ನು ಮಾಡಿರುವಾಗ ಇಲ್ಲಿ ಮತ್ತೆ ಪರಿಶೀಲನೆಗೆ ಎಂದು ತೆಗೆದುಕೊಳ್ಳುವುದು ಅನಾವಶ್ಯಕ ಎಂದು ನಾನು ಭಾವಿಸುತ್ತೇನೆ. ಇದಕ್ಕೋಸ್ಕರ ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಇರತಕ್ಕ ಚೀಫ್ ಇಂಜನೀಯರು, ಸೂಪರಿಂಟೆಂಡಿಂಗ್ ಇಂಜನೀಯರು, ಹಾಗೂ ಎಕ್ಸಿಕ್ಯೂಟೀವ್ ಇಂಜನೀಯರುಗಳ ಸಿಬ್ಬಂದಿಯನ್ನು ತೆಗೆದು ಹಾಕುವುದು ಸೂಕ್ತ ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಮಂತ್ರಿಗಳಿಗೆ ಈಗ ಎಷ್ಟೊಂದು ಶಿಬ್ಬಂದಿ ಇದೆ ಇದು ಅನಾವಶ್ಯಕ. ಇವರಿಗೆ ಒಬ್ಬರು ಪ್ರೈವೇಟ್ ಸೆಕ್ರೆಟರಿ ಅಥವಾ ಪರ್ಸನಲ್ ಅಸಿಸ್ಟೆಂಟರು, ಒಬ್ಬರು ಪರ್ಸನಲ್ ಕ್ಲಾರ್ಕು ಇದ್ದರೆ ಸಾಕು. ಇಲ್ಲಿ ಇಷ್ಟು ಹೆಚ್ಚು ಸಿಬ್ಬಂದಿಯನ್ನು ಹಾಕುವುದು ಅನಾವಶ್ಯಕ ಎಂದು ನಾನು ಭಾವಿಸುತ್ತೇನೆ. ಆದರೆ ಈಗ ಇರುವ ಇಷ್ಟು ಸಿಬ್ಬಂದಿಯಿದ್ದೇ ಇಷ್ಟು ದಕ್ಷತೆಯಿಂದ ಕೆಲಸ ನಡೆಯುತ್ತಿದೆ. ಇನ್ನು ಮುಂದೆ ಸಿಬ್ಬಂದಿಯನ್ನು ಕಡಿಮೆ ಮಾಡಿದರೆ ಆಗ ದಕ್ಷತೆ ಕಡಿಮೆಯಾಗಿ ಕೆಲಸ ಆಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇಲ್ಲಿ ಹೆಚ್ಚು ಸಿಬ್ಬಂದಿ ಇಡುವುದು ಅನಾವಶ್ಯಕ ಎಂದು ಸಲಹೆ ಮಾಡುತ್ತೇನೆ ಮತ್ತು ಸೆಕ್ರೆಟೇರಿಯಟ್ ಲೆವಲ್‌ನಲ್ಲಿಯೂ ಈಗ ಇರುವ ಕೆಲವು ಹುದ್ದೆಗಳನ್ನು ಕಡಮೆ ಮಾಡುವುದು ಉತ್ತಮ ಎಂದು ನಾನು ಇಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಮ್ಯಾನ ಸ್ಪೀಕರ್‌ರವರ ಸಿಬ್ಬಂದಿಯನ್ನೂ ಕೂಡ ಕಡಿಮೆ ಮಾಡಿಕೊಳ್ಳುವುದು ಸೂಕ್ತ ಎಂದು ನಾನು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳಲು ಇಷ್ಟಪಡುತ್ತೇನೆ.

Mr. SPEAKER.—I must tell the Hon'ble Member that he must come and tell me if he has any suggestions to make regarding Legislature Secretariat.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇನ್ನು ನಮ್ಮ ಮಂತ್ರಿಗಳ ಮನೆಗಳನ್ನು 'ಫರ್ನಿಷ್' ಮಾಡುವುದಕ್ಕೆ ಇಷ್ಟೊಂದು ಖರ್ಚನ್ನೇಕೆ ಮಾಡುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇದಕ್ಕಾಗಿ ಸುಮಾರು ಹದಿನೈದು ಇಪ್ಪತ್ತು ಸಾವಿರ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಒಂದು ಸಲ ಇದ್ದ ಡೋರ್ ಕರ್ಟನ್ ಇನ್ನೊಂದು ಸಾರಿ ನೋಡುವ ವೇಳೆಗೆ ಅದು ಬದಲಾವಣೆಯಾಗಿ ಅದರ ಅಂದಾಜಿನ ವೆಚ್ಚ ಸುಮಾರು ಒಂದಕ್ಕೆ ಹತ್ತರಷ್ಟು ಜಾಸ್ತಿಯಾಗಿರುತ್ತದೆ. ಸರಕಾರ ಇದನ್ನು ಕಡಿಮೆ ಮಾಡಿಕೊಳ್ಳಲು ಆಗುವುದಿಲ್ಲವೇ? ಇದಕ್ಕಾಗಿ ಇಷ್ಟು ಹಣ ಎಂದು ನಿಗದಿ ಮಾಡಿ ಸುಮಾರು ನಾನೂರು ಅಥವಾ ಐದುನೂರು ಎಂದು ಮಾಡಿ ಹೆಚ್ಚು ಖರ್ಚಾಗುವುದನ್ನು ತಪ್ಪಿಸಬಹುದು. ಇದಕ್ಕಾಗಿ ಇಷ್ಟೊಂದು ಹಣ ಖರ್ಚುಮಾಡುವುದು ಸೂಕ್ತವಲ್ಲ ಎಂದು ನಾನು ಭಾವಿಸುತ್ತೇನೆ.

ಇನ್ನು ಸೆಕ್ರೆಟೇರಿಯಟ್‌ನಲ್ಲಿರತಕ್ಕ ಸಿಬ್ಬಂದಿಯವರನ್ನೂ ಕಡಿಮೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಅದನ್ನೂ ಯೋಚನೆಮಾಡಬೇಕು.

ಇನ್ನು ಸ್ಟೋರ್ಸ್ ಪರ್ಚೇಸು ಕಮಿಟಿ ಎಂದು ನಮ್ಮ ಸರಕಾರದಲ್ಲಿ ಒಂದು ಕಮಿಟಿ ಇದೆ. ಈ ಕಮಿಟಿಯವರು ಕಳುಹಿಸುವ ಪದಾರ್ಥಗಳನ್ನು ಸರಕಾರದವರು ಪರಿಶೀಲನೆ ಮಾಡಿ ನೋಡಿದರೆ ಮಾರ್ಕೆಟ್ಟು ರೇಟಿಗಿಂತ ಅದರ ಬೆಲೆ ಸೇಕಡ ಹತ್ತರಷ್ಟು ಜಾಸ್ತಿಯಾಗಿರುತ್ತದೆ. ಇದು ಅನಾವಶ್ಯಕ. ಇರತಕ್ಕ ಸಿಬ್ಬಂದಿಯನ್ನು ಜಾಸ್ತಿ ಮಾಡಿ ಸ್ಟೋರ್ಸ್ ಪರ್ಚೇಸ್ ಕಮಿಟಿ ಮುಖಾಂತರ ಟೆಂಡರ್ ಕರೆದು ಸಾಮಾನುಗಳನ್ನು ಒದಗಿಸಿಕೊಳ್ಳುವ ವ್ಯವಸ್ಥೆ ಬಿಟ್ಟರೆ ಸೇಕಡ 10 ರಷ್ಟು ಉಳಿತಾಯವಾಗುತ್ತದೆ. ಅದನ್ನು ತಾವು ಸ್ಪಷ್ಟವಾಗಿ ಪರಿಶೀಲನೆ ಮಾಡಬಹುದು. ಸ್ಟೋರ್ಸ್ ಪರ್ಚೇಸ್ ಮುಖಾಂತರ ಬಂದಿರುವ ಸಾಮಾನುಗಳ ಬೆಲೆ ಎಷ್ಟಿತ್ತು, ಮಾರ್ಕೆಟ್ಟಿನಲ್ಲಿ ಅದರ ಬೆಲೆ ಎಷ್ಟಿತ್ತೆಂಬುದನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ.

ಇನ್ನು ಚೀಫ್ ಇಂಜನಿಯರುಗಳ ಸಂಖ್ಯೆ ನೋಡಿದರೆ, ಇಷ್ಟು ಸಣ್ಣ ದೇಶಕ್ಕೆ ಅವರ ಈಗಿನ ಸಂಖ್ಯೆ ಅನಾವಶ್ಯಕವೆಂದು ನಾನು ಭಾವಿಸುತ್ತೇನೆ. ಅದನ್ನು ಆದಷ್ಟು ಕಡಿಮೆ ಮಾಡಬೇಕು. ಈಗ ಇರತಕ್ಕ ಸಿಬ್ಬಂದಿಯನ್ನೂ ಸಹ ಕಡಿಮೆಮಾಡಿದರೆ ಸಾಕಾದಷ್ಟು ರಾಜ್ಯದ ಹಿತಸಾಧನೆಯಾಗುತ್ತದೆ. ಆದ್ದರಿಂದ ಸ್ವಲ್ಪಮಟ್ಟಿಗಾದರೂ ಹಣ ಉಳಿತಾಯವಾಗಿ ಆ ದುಡ್ಡನ್ನು ನೀರಾವರಿ ಕಾಮಗಾರಿಗಳಿಗಾಗಿ ಖರ್ಚುಮಾಡಿದರೆ ಇನ್ನಷ್ಟು ಆಹಾರವನ್ನು ಜಾಸ್ತಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri B. P. GANGADHAR (Tumkur).—Mr. Speaker Sir, of course, I will concentrate my remarks only on one or two issues and leave the rest as there is no time.

I have not been able to understand the policy of our Government with regard to development of industry as also agriculture. If I give you one or two examples with regard to the type of persons who are encouraged, it will raise doubts as to how our industry and agriculture will develop. Sufficient encouragement and facilities must be given to

(SRI B. P. GANGADHAR)

the person who is really an industrialist or who has experience in starting and running industrial establishments. But unfortunately our Government is giving encouragement to person who are neither industrialists nor agriculturists in the real sense of the term. For that matter, our Governments has availed the opportunities available to them to confer benefits on whomsoever they like. I will give instances to show that they have conferred benefits on leading Congressmen in the name of development of agriculture and industrial sector. A leading Congressman of Tumkur, I do not want to mention his name, was given a big site in the Industrial Suburb of Rajajinagar, Bangalore, at a very small upset price. He has sold it away for Rs. 50 thousand. If the Government gives encouragement to such persons and give facilities, how can industries develop in the State ? The industrial policy of our Government has turned out to be a money-making industry for the privileged few. I have no other go but to use such a strong expression so that Government may mend themselves and give encouragement to deserving people having the interests of the State at heart. To add insult to the injury, the very same person was granted lands thrice in Chicknaikanahalli ; once 8 acres, another time 5 acres ; Yet another time he was given 10 acres. All these properties have been sold by him within a span of two to three years for a sum of Rs. 45 thousand in the aggregate. There are many more instances of the kind. But these two instances are conclusive proof that the attitude of the Congress Party and our rulers is to see that only Congressmen must be benefited by the Government. That is why I said earlier that all the measures devised on the floor of this House have been converted into a money-making industry by the Government for their henchmen. If this is the attitude of the Government and the ruling party, how can our industries or agriculture develop ? If these favouritism and nepotism continue, the prospects for the promotion of agriculture and industry in our State are very gloomy The hon'ble Members on the other side, this side and everybody say that agriculture must develop and agriculturists must prosper. What is the use if instead of giving lands to the landless agriculturists, they are given to persons of the type I cited above, who want to make profit by selling away lands. People who are influential with the ruling class are knocking off landed properties and making huge monies out of them. This is the type of administration we are getting from this Government. I warn the Government that at least in future they should not indulge in such malapractices as conferring benefits to their own men or their followers. All these acts set up very bad and unhealthy precedents for the future. If the other Party comes to power, and commits such misdeeds they will quote the examples of misrule during Congress regime. I hope the Government will discontinue such things.

Let me now come to General Administration. When the hon'ble Chief Minister was replying day before yesterday on his Demands, there

was a little breeze when the Opposition members anxiously desired to know from him the decision Government had taken or would take with regard to the absence of the N.G.Os. in January last when they went on strike for three days for early settlement of their demands. My point is this: there are thousands of non-gazetted officers in our State; they have been toiling hard. Just now I quoted the instance of a Congressman and showed how he had become rich overnight. On the contrary, these unfortunate N. G. Os. toil and labour but find it impossible to make both ends meet. Not only these N. G. Os., their wives and children and dependents will be put to hardships if their absence during the strike period is not treated as leave. If it is treated as unauthorised absence, their previous whole service will be in vain; it won't count for pension and other benefits. Even increments of N. G. Os. have not been sanctioned on this ground. These are very hard days and if the poor N. G. Os. are deprived of even their increments to which they are entitled from year to year, it will add to their suffering. The Government should not come in the way of benefits which are due to them in the usual course. These N.G.Os. have been cursing this Government to go very soon. Their bellies are very important to them and they have been going without food so many times. This is the plight of the N. G. Os. who have service. What about the fate of those officials who have retired this year or about to retire? The pensions of those who took part in the strike movement and subsequently retired have been withheld on the ground that their absence for those three days is unauthorised and amounts to break of service. This penalty is too much. Before my mind come the teachers who were responsible for giving us education. Do you pay your debt of gratitude to your *Gurus* by denying them their pensions? But for them, several members who are here would not have been able to work for the betterment of this country. We must not neglect the teachers who trained the future citizens and rendered such useful service by refusing them pension and other benefits. I request the Government with all the emphasis I can lay, to treat these three days of absence in connection with the N. G. Os. strike as leave and give the N. G. Os. all the benefits they are entitled to, so that they may bless this Government to be in power for a couple of months at least before the next Budget Session.

I am thankful to the hon'ble Speaker for giving me this opportunity to give my views.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಈ ದಿವಸದ ಅಪ್ರೋಪ್ರಿಯೇಷನ್ ಬಿಲ್ಲನ್ನು ಸ್ವಾಗತಿಸುತ್ತಾ ಕೆಲವು ವಿಚಾರವನ್ನು ತಿಳಿಸಬಯಸುತ್ತೇನೆ. ಇಡೀ ದೇಶದಲ್ಲಿ ವಿದ್ಯಾಭ್ಯಾಸಕ್ಕೆ ಇರುವ ಕೊರತೆ ಏನೆಂದರೆ ಸಕಾಲಕ್ಕೆ ಟೆಕ್ಸ್ಟ್ ಬುಕ್ಸ್ ಸಿಗುತ್ತಿಲ್ಲ. ಛಾಪಾ ಕಾಗದಗಳು ಸಕಾಲಕ್ಕೆ ಸಿಗದೆ ರಿಜಿಸ್ಟ್ರೇಷನ್ ಆಗದೇ ಅಲ್ಲಿ ನಡೆಯತಕ್ಕ ಅನ್ಯಾಯ ಬಹಳವಾಗಿ ಆಗಿದೆ. ಇದನ್ನು ನೋಡಿದರೆ ಈ ದೇಶದಲ್ಲಿ ಇಷ್ಟು ದೊಡ್ಡ ಪ್ರಿಂಟಿಂಗ್ ಪ್ರೆಸ್ ಇದ್ದರೂ ದಿನೇ ದಿನೇ ಅದು ಬೆಳೆಯುತ್ತಿದ್ದರೂ ಈ ಕಷ್ಟವನ್ನು ಸರ್ಕಾರದವರು ಏತಕ್ಕೆ ನಿವಾರಣೆಮಾಡಲಿಲ್ಲ? ಇದು ಬಹಳ ಶೋಚನೀಯವಾದ ಸಂಗತಿ. ಇದಕ್ಕೆ ಸರಿಯಾದ ವ್ಯವಸ್ಥೆಮಾಡಬೇಕು. ಕಡ್ಡಾಯ ಶಿಕ್ಷಣ ಜಾರಿಯಲ್ಲಿದ್ದರೂ ಸಕಾಲದಲ್ಲಿ ಪುಸ್ತಕಗಳು ಬರುತ್ತಾ ಇಲ್ಲ. ಬೇಸಾಯ ಕಾಲೋನಿಗಳ ವಿಚಾರದಲ್ಲಿ

(ಶ್ರೀ ಕೆ. ಪ್ರಭಾಕರ್)

ಖಚಿತವಾದ ನಿಲುವನ್ನು ತೆಗೆದುಕೊಳ್ಳಬೇಕು. ಕೋ-ಆಪರೇಟಿವ್ ಫಾರ್ಮಿಂಗ್‌ನಲ್ಲಿ ಅಗ್ರಿಕಲ್ಚರಲ್ ಲೇಬರ್ ದೃಷ್ಟಿಯಿಂದ ನಿರುದ್ಯೋಗಿಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು. ಗ್ರೋ ಮೋರ್ ಡ್ ಸ್ಕೀಂನಲ್ಲಿ ಖಚಿತವಾದ ನಿಲುವನ್ನು ಸರ್ಕಾರದವರು ತೆಗೆದುಕೊಂಡು ಅಲ್ಲಿ ಕೆಲಸ ಕಾರ್ಯಗಳನ್ನು ಕೊಡುವ ರೀತಿಯಲ್ಲಿ ಕಾರ್ಯಗತಮಾಡಬೇಕು.

ಇನ್ನು ಸಹಕಾರ ಸಂಘಗಳಲ್ಲಿ ದುಡ್ಡು ಅನ್ಯಾಯವಾಗಿ ಅನೇಕ ವಿಧಗಳಲ್ಲಿ ಖರ್ಚಾಗುತ್ತಿದೆ. ಅಲ್ಲಿ ಬಡವರ ಸಂಖ್ಯೆ ಹೆಚ್ಚಾಗಿರುವುದಿಲ್ಲ. ಸೊಸೈಟಿಗಳ ಏರಿಯಾದಲ್ಲಿರತಕ್ಕ ಪ್ರತಿಯೊಂದು ಕುಟುಂಬದವರು ಆಯಾ ಸೊಸೈಟಿಯ ಸದಸ್ಯರಾಗಲು ಶ್ರದ್ಧೆವಹಿಸಬೇಕು. ಅಂತಹ ಸಂದರ್ಭದಲ್ಲಿ ಸರ್ಕಾರದವರು ಬಡವರಿಗೆ ಆ ಸೊಸೈಟಿಯಲ್ಲಿ ಷೇರು ಹಣವನ್ನು ಸಾಲದ ರೂಪದಲ್ಲಿ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮಾನ್ಯ ಶ್ರೀ ಗೋಪಾಲಗೌಡರು ನಿರುದ್ಯೋಗಿಗಳನ್ನು ಭೂಸ್ವಾಮ್ಯ ಎಂಬುದಾಗಿ ಹೇಳಿದರು. ನಾನು ಅಕ್ಷರಶಃ ಒಪ್ಪುತ್ತೇನೆ. ಸತ್ಯಕ್ಕೆ ಒಪ್ಪುವಂತಹ ಮಾತು ಅದು. ಎಲ್ಲರೂ ಅದನ್ನು ಒಪ್ಪಬೇಕಾಗಿದೆ. ಜಮೀನು ಇಲ್ಲದ ಕುಟುಂಬ ವರ್ಗದವರಿಗೆ ಸಕಾಲದಲ್ಲಿ ಅವರ ಕೆಲಸಕಾರ್ಯ ಆಗುವಂತೆ ಕಂಟ್ರಾಕ್ಟರುಗಳ ಮುಖಾಂತರ ಕೆಲಸಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಅವರಿಗೆ ಸಹಾಯಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಇರತಕ್ಕ ಅಧಿಕಾರಿಗಳು ಬಹಳ ಮುಂದಿದ್ದಾರೆ. ನಿಜ. ಇದರಲ್ಲಿ ಸೀನಿಯರ್ ಐ. ಎ. ಎಸ್. ಆಫೀಸರನ್ನು ಹಾಕಿ ಇದರ ಕರ್ತವ್ಯವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು. ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಇರತಕ್ಕ ಇನ್‌ಸ್ಪೆಕ್ಟರುಗಳಿಗೆ ಸಂಬಳ ಸಾರಿಗೆಯನ್ನು ರಿವೈಜ್ ಮಾಡಿಲ್ಲ. ಅವರು 10-12 ವರ್ಷಗಳಿಂದ ಒಂದೇ ಗ್ರೇಡಿನಲ್ಲಿದ್ದಾರೆ. ಅವರು ರೆವಿನ್ಯೂ ಇಲಾಖೆಗೆ ಸೇರಿದ್ದರೆ ಅವರಿಗೆ ಏನು ಸಂಬಳ ಸಾರಿಗೆ ಸಿಕ್ಕುತ್ತಿತ್ತೋ ಆ ಸ್ಕೇಲಿನಲ್ಲಿ ಅವರ ಸಂಬಳ ಸಾರಿಗೆಯನ್ನು ರಿವೈಜ್ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಪಿ. ಡಬ್ಲ್ಯು. ಕಂಟ್ರಾಕ್ಟನ್ನು ಸೊಸೈಟಿಗಳ ಮುಖಾಂತರ ಮಾಡಿಸಬೇಕೆಂದು ಸರ್ಕಾರದ ಆದೇಶ ಇದೆ. ಆದರೆ ಸೊಸೈಟಿಗಳ ಮುಖಾಂತರ ಆ ಕೆಲಸ ಹೆಚ್ಚಿನ ರೀತಿಯಲ್ಲಿ ಸಾಗಿಲ್ಲ. ಆದ್ದರಿಂದ ಅವುಗಳನ್ನು ಸೊಸೈಟಿಗಳ ಮುಖಾಂತ ಕಂಟ್ರಾಕ್ಟ್ ಮಾಡಿಸುವ ವ್ಯವಸ್ಥೆಗೆ ಸರ್ಕಾರದವರು ಖಚಿತವಾಗಿ ಖಂಡಿತವಾಗಿ ನಿಗಾಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಎನ್. ಜಿ. ಓ. ಗಳು ವಿಷಯದಲ್ಲಿ ಏನೋ ಗುಲು ಗುಲು, ಗುಸು, ಗುಸು ಕೇಳಿಬರುತ್ತದೆ. ಅವರ ಬಗ್ಗೆ ತಣುಕು ಮಿಣುಕು ರೀತಿಯಲ್ಲಿ ಹೇಳಬಾರದು, ಖಚಿತವಾಗಿ ಒಂದು ನಿಗದಿ ಮಾಡಿ ಎಷ್ಟು ಕೊಡುವುದಕ್ಕೆ ಆಗುತ್ತದೆ, ಅಥವಾ ಇಲ್ಲ ಎಂಬುದನ್ನು ಹೇಳಬೇಕು. ಅವರ ವಿಚಾರವಲ್ಲಿ ಒಂದು ತೂಗಾಟದ ರೀತಿಯಲ್ಲಿ ಹೇಳಬಾರದು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪಾನನಿರೋಧದ ವಿಷಯದಲ್ಲಿ ಹೇಳುವುದಾದರೆ, ಈಗ ದೇಶದಲ್ಲಿ ಕುಡಿಯುವವರ ಸಂಘ ಮತ್ತು ಕುಡಿಯದೇ ಇರುವವರ ಸಂಘ ಎಂದು ಮಾಡಿಕೊಂಡು ಸಮಾಜದಲ್ಲಿ ಇದರ ಹಾವಳಿಯನ್ನು ತಪ್ಪಿಸಬೇಕು. ಸರ್ಕಾರದವರು ದುಡ್ಡುಕೊಟ್ಟು ಕುಡಿಯದೇ ಇರುವವರ ಸಂಘದಿಂದ ಇದರ ಪ್ರಚಾರವನ್ನು ಮಾಡಿಸಿ, ಪ್ರಾಪಗ್ಯಾಂಡಾ ಮಾಡಿಸಿ ಕುಡಿಯುತಕ್ಕವರನ್ನು ಕುಡಿಯುವೇ ಇರುವ ಹಾಗೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ರಿಲೀಫ್ ಕಾಮಗಾರಿಗಳನ್ನು ಅನೇಕ ಕಡೆ ಅನೇಕ ರೀತಿಯಲ್ಲಿ ಮಾಡಿದ್ದಾರೆ. ಆ ಕಾಮಗಾರಿ ಕೆಲಸಗಳನ್ನು ಮಾಡುವಾಗ ಅವುಗಳನ್ನು ತಾತ್ಕಾಲಿಕವಾದ ಕೆಲಸಗಳನ್ನಾಗಿ ಮಾಡದೇ ಅವು ಶಾಶ್ವತವಾದ ರೀತಿಯಲ್ಲಿ ಉಳಿಯುವಂತೆ ಮಾಡಬೇಕು. ಇಲ್ಲದೇ ಇದ್ದರೆ ರಾಷ್ಟ್ರದ ಹಣ ವ್ಯರ್ಥವಾಗುತ್ತದೆ. ಆದ್ದರಿಂದ ಅವುಗಳನ್ನು ಯೋಜನಾ ಬದ್ಧವಾಗಿ ರೂಪಿಸಿ ಕೆರೆಕಟ್ಟೆಗಳನ್ನು ಕಟ್ಟಿಸಿ ಕೊಟ್ಟು ಅವುಗಳಿಂದ ರೈತರಿಗೆ ಉಪಯೋಗವಾಗುವ ಹಾಗೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನು ಇಲ್ಲದೇ ಇರತಕ್ಕ ರೈತರುಗಳ ಒಂದು ಪಟ್ಟಿಯನ್ನು ತಯಾರು ಮಾಡಿಸಿ, ಸರ್ಕಾರದವರು ಬಂಡವಾಳವನ್ನು ಹಾಕಿರತಕ್ಕ ಕೈಗಾರಿಕೆಗಳಲ್ಲಿ ಅವರುಗಳಿಗೆ ಉದ್ಯೋಗವನ್ನು ಕೊಡಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಖಾದಿ ಬೋರ್ಡಿಗೆ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈಗ ಸ್ಟೇಟ್ ಲೆವೆಲ್ ಲೆದರ್ ಇಂಡಸ್ಟ್ರಿಯಲ್ ಬೋರ್ಡು ಎಂದು ಮಾಡಿ ಅದರಲ್ಲಿ ಸ್ವೈಕರಿಗೆ ಬೇಕಾಗುವ ಬೂಟುಗಳನ್ನು ತಯಾರುಮಾಡುವಂತೆ ಮಾಡಿದರೆ ಬೇರೆಯವರ ಕೈಗೆ

ಹೋಗುವಹಣ ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ಖಾದಿ ಬೋರ್ಡಿನಲ್ಲಿ ಲೆದರ್ ಇಂಡಸ್ಟ್ರಿಯನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ರೈತರಿಗೆ ಐ. ಪಿ. ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕೆ ಹಣವನ್ನು ಸರ್ಕಾರದವರು ಕೊಡುತ್ತಿದ್ದಾರೆ. ಇದು ಸಮರ್ಪಕವಾದ ರೀತಿಯಲ್ಲಿ ನಡೆಯುತ್ತಿಲ್ಲ. ಐ. ಪಿ. ಸೆಟ್ಟುಗಳು ರೈತರಿಗೆ ಸುಲಭವಾಗಿ ಸಿಕ್ಕುವಂತೆ ವ್ಯವಸ್ಥೆಮಾಡಬೇಕು. ಆದ್ದರಿಂದ ಈ ಹಣ ರೈತರಿಗೇ ನೇರವಾಗಿ ದೊರೆಯುವಂತೆ ಮಾಡಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಖುದ್ದುಹೋಗಿ ರೈತರಿಗೆ ಸಹಾಯಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ; ಮತ್ತು ಐ. ಪಿ. ಸೆಟ್ಟುಗಳಿಗೆ ಎಲೆಕ್ಟ್ರಿಸಿಟಿ ಲೈನನ್ನೂ ಸರ್ಕಾರದ ಖರ್ಚಿನಲ್ಲೇ ಹಾಕಿಸಿಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಹರಿಜನರ ಹಾಸ್ಟಲುಗಳಿಗೆ ಸರ್ಕಾರದವರು ಅನೇಕಕಡೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅಲ್ಲಿ 10-12 ಸಾವಿರ ಮಕ್ಕಳು ಇದ್ದಾರೆ. ಬಹಳ ಸಂತೋಷ. ಆದರೆ ಆ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಪಾಸಾಗತಕ್ಕಂಥ ಸಂಖ್ಯೆಯನ್ನು ನೋಡಿದರೆ ಬಹಳ ಶೋಚನೀಯವಾಗುತ್ತದೆ. ಅಲ್ಲಿ ಅವರಿಗೆ ತಂದೆ ತಾಯಿಗಳ ವಾತಾವರಣ ಇರುವುದಿಲ್ಲ. ಆದ್ದರಿಂದ ಅಲ್ಲಿ ಅವರಿಗೆ ಸಾಕಷ್ಟು ಗೈಡೆನ್ಸ್ ಇರುವುದಿಲ್ಲ. ಈ ದೃಷ್ಟಿಯಿಂದ ಆ ಹಾಸ್ಟಲುಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸ್ವಲ್ಪ ಕೋಚಿಂಗ್ ಕೊಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು; ಮತ್ತು ಹಾಸ್ಟಲುಗಳಲ್ಲಿ ಸ್ವಲ್ಪ ಬಿಗಿ ಮಾಡಬೇಕು, ಈ ರೀತಿ ಮಾಡಿ ಒಂದು ಒಳ್ಳೆಯ ಹೆಸರನ್ನು ಪಡೆಯುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಬಹು ಮುಖ್ಯವಾಗಿ ಬೇಕಾಗಿರತಕ್ಕದ್ದು ಜನರು ಜೀವನ ಮಾಡತಕ್ಕ ವಿಚಾರ. ಮುನಿಸಿಪಾಲಿಟಿಯವರು ಕೆಲವು ಪದಾರ್ಥಗಳಿಗೆ ಹೆಚ್ಚಿನ ಸುಂಕವನ್ನ ಹಾಕುತ್ತಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ, ಒಂದು ಪಡವಲಕಾಯಿ ಬೆಲೆ ೪ ಆಣೆ ಇದ್ದರೆ ಅದಕ್ಕೆ ಒಂದು ಆಣೆ ಸುಂಕವನ್ನು ಸೇರಿಸುತ್ತಾರೆ ಎಸೆನ್ಷಿಯಲ್ ಕಮಾಡಿಟೀಸ್ ಏನಿವೆಯೋ ಅವುಗಳಿಗೆ ಮುನಿಸಿಪಾಲಿಟಿಯವರು ಸುಂಕವನ್ನು ಹಾಕುವುದನ್ನು ತಪ್ಪಿಸಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಇನ್ನು ಗ್ರಾಮಾಭಿವೃದ್ಧಿಯ ವಿಚಾರದಲ್ಲಿ ಹೇಳುವುದಾದರೆ ಹಿಂದೆ ನಮಗೆ ಪ್ರಾಣರೂಪದಲ್ಲಿದ್ದ ಪಂಡಿತ್ ನೆಹರೂ ಅವರು ಒಂದು ಊರಿಗೆ ರಸ್ತೆ, ಸ್ಕೂಲು, ಬಾವಿ, ಒಂದು ಸೊಸೈಟಿ ಇರಬೇಕೆಂದು ಹೇಳಿ ಹೊರಟುಹೋದರು. ಗ್ರಾಮಾಂತರ ಪ್ರದೇಶಗಳಿಗೆ ರಸ್ತೆಗಳನ್ನು ಮಾಡಿಸಬೇಕು, ಅಲ್ಲಿನ ಜನಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಬೇಕು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅನುಕೂಲವಾಗುವ ಹಾಗೆ ವಿದ್ಯಾಶಾಲೆಗಳನ್ನು ಸ್ಥಾಪನೆ ಮಾಡಬೇಕು. ಈ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಸೌಲಭ್ಯವನ್ನ ಒದಗಿಸಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಗ್ರಾಮಪಂಚಾಯಿತಿ ಆಕ್ಟ್ ಪ್ರಕಾರ ಗ್ರಾಮಪಂಚಾಯಿತಿ ಸರಹದ್ದಿನಲ್ಲಿರತಕ್ಕ ಹೋಟೆಲುಗಳಲ್ಲಿ ಅಸ್ಪೃಶ್ಯತೆಗೆ ಸಂಬಂಧಪಟ್ಟ ಕಾನೂನು ಜಾರಿಯಲ್ಲಿ ಇದೆಯೋ ಇಲ್ಲವೋ ಎಂದು ನನಗೆ ಸಂಶಯ ಬರುತ್ತಿದೆ. ಗ್ರಾಮಪಂಚಾಯಿತಿಯ ಸರಹದ್ದಿನಲ್ಲಿ ಲೈಸೆನ್ಸ್ ಇಲ್ಲವೆ ಇರತಕ್ಕ ಹೋಟೆಲುಗಳು ಯಾವು ಯಾವುವು ಇವೆಯೋ ಅವುಗಳನ್ನ ರದ್ದುಮಾಡಬೇಕು, ಮತ್ತು ಹೋಟೆಲನ್ನು ಇಡುವುದಕ್ಕೆ ಲೈಸೆನ್ಸ್ ಕೊಟ್ಟು, ಅಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಪಟ್ಟ ಕಾನೂನನ್ನು ಅಲ್ಲಿ ಜಾರಿಗೆ ತರವೆ, ಸಾರ್ವಜನಿಕವಾಗಿ ಆ ಹೋಟೆಲನ್ನು ನಡೆಸುವುದಿಲ್ಲ ಎಂದು ಕಂಡುಬಂದರೆ ಅಂಥಾ ಹೋಟೆಲಿನ ಲೈಸೆನ್ಸ್ ರದ್ದುಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನ ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಯವ್ಯಯ ಮುಂಗಡ ಪತ್ರದಮೇಲೆ ಸಾಮಾನ್ಯ ಚರ್ಚೆ ಈ ಸಭೆಯಲ್ಲಿ ಆಯಿತು. ಆಮೇಲೆ ಬೇರೆ ಬೇರೆ ಖಾತೆಗಳಿಗೆ ಸಂಬಂಧಪಟ್ಟ ಬೇಡಿಕೆಗಳಮೇಲೆ ಚರ್ಚೆ ಆಯಿತು. ಈಗ ಈ ಹಣದ ವಿನಿಯೋಗ ಮಸೂದೆಯ ಮೇಲೆ ಚರ್ಚೆ ಮಾಡತಕ್ಕ ಅಗತ್ಯ ಇರಲಿಲ್ಲ. ಆದರೂ ಅನೇಕ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮುಂಗಡ ಪತ್ರದಲ್ಲಿ ನಾವು ಎಷ್ಟೇ ಪ್ರಯತ್ನ ಮಾಡಿದರೂ ಬರುವ ವರ್ಷದಲ್ಲಿ ಹಣಕಾಸಿನ ಚಿತ್ರ ಹೇಗಿರಬಹುದು ಎನ್ನುವುದರ ಬಗ್ಗೆ ನೂರಕ್ಕೆ ನೂರರಷ್ಟು ಸರಿಯಾದ ಚಿತ್ರವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂಗಡ ಪತ್ರವನ್ನು ತಯಾರು ಮಾಡಬೇಕಾಗಿದ್ದರೆ ನಾವು ಕೆಲವು ಅಂಕೆ ಸಂಖ್ಯೆಗಳ ಆಧಾರದಮೇಲೆ, ಕೆಲವು ಊಹೆಯ ಆಧಾರದಮೇಲೆ, ಮುಂಗಡ ಪತ್ರವನ್ನು ತಯಾರು ಮಾಡಬೇಕಾಗುತ್ತದೆ. ಆದ್ದರಿಂದ ಮುಖ್ಯವಾಗಿ ಊಹೆಯ ಆಶಾವಾದಗಳು ಈ ಮುಂಗಡ ಪತ್ರದಲ್ಲಿ ಸೇರಿವೆ. ಈ ರೀತಿಯಾದಂತಹ ಬರುವ ವರ್ಷದ ಒಂದು ಮುಂಗಡ ಪತ್ರವನ್ನು ನಾವು ಈ ಸಭೆಯ ಮುಂದೆ

(ಶ್ರೀ ರಾಮಕೃಷ್ಣ ಹೆಗಡೆ)

ಇಟ್ಟಿದ್ದೇವೆ. ಈ ವರ್ಷದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಇಡೀ ದೇಶದಲ್ಲಿ ಮಳೆಯ ಪರಿಸ್ಥಿತಿ ಚೆನ್ನಾಗಿ ಆಗುತ್ತದೆ ಎಂದು ಹೇಳತಕ್ಕಂಥ ಆಶಾವಾದ ಅದರ ಹೊರತಾಗಿ ಇನ್ನೂ ಒಂದೆರಡು ಮುಖ್ಯ ಗೃಹಿಕೆ ಇವುಗಳ ಮೇಲೆ ಮುಂಗಡ ಪತ್ರ ಆಧಾರಯುತವಾಗಿದೆ. ಹಿಂದಿನ ಪ್ರಸಂಗದಲ್ಲಿ ಪ್ರಸ್ತಾಪಿಸಿದ ಎರಡು ಮುಖ್ಯ ಗೃಹಿಕೆ ಏನು ಎಂದರೆ, ಮೊದಲನೆಯದು ಬರುವ ವರ್ಷದಲ್ಲಿ ಸರ್ಕಾರಿ ಕರ್ಮಚಾರಿಗಳ ವೇತನ, ತುಟ್ಟಿಭತ್ಯ ಇವುಗಳ ಬಗ್ಗೆ ಹೆಚ್ಚಿನ ಖರ್ಚು ಮಾಡಬೇಕಾದ ಅಗತ್ಯ ಬರುವುದಿಲ್ಲ ಎನ್ನುವ ಗೃಹಿಕೆ, ಎರಡನೆಯ ಗೃಹಿಕೆಯ ವಿಚಾರದಲ್ಲೂ ಈ ವರ್ಷದಲ್ಲಿ ಪಾನನಿರೋಧ ಕಾಯಿದೆಯಲ್ಲಿ ಬದಲಾವಣೆ ಮಾಡಿ ಅದರಿಂದ ಸುಮಾರು ನಾಲ್ಕುಕೋಟಿ ರೂಪಾಯಿಗಳ ಉತ್ಪನ್ನ ಬರಬಹುದು ಎಂಬ ಗೃಹಿಕೆ; ಸುದೈವದಿಂದ ನೈಸರ್ಗಿಕ ಪರಿಸ್ಥಿತಿ ಇವೊತ್ತಿನವರೆಗೂ ನೋಡಿದರೆ ಈ ವರ್ಷ ಅನುಕೂಲವಾಗುವ ಹಾಗೆ ಕಾಣುತ್ತಿದೆ.

4–30 P.M.

ಪಾನ ನಿರೋಧ ವಿಚಾರದಲ್ಲಿ ಇದರಿಂದ ಬರತಕ್ಕ ಆದಾಯದ ವಿಚಾರದಲ್ಲಿ ಈ ಮಾನ್ಯ ಸಭೆಯಲ್ಲಿ ಕೆಲವು ದಿವಸಗಳ ಹಿಂದೆ ಪಾನನಿರೋಧ ಕಾಯಿದೆಯಲ್ಲಿ ಮಾಡತಕ್ಕಂಥ ಬದಲಾವಣೆ ತಿದ್ದುಪಡಿ ಮಂಜೂರು ಆಗಿದೆ, ಇನ್ನೂ ಒಂದು ಅನುಮಾನಾಸ್ಪದಡಿಂವ ಈ ಮುಂಗಡ ಪತ್ರಿಕೆ ಇದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದು ಗಜೇಂದ್ರಗಡಕರ ಕಮಿಷನ್ನಿನವರು ಕೇಂದ್ರ ಸರಕಾರಕ್ಕೆ ಯಾವ ಶಿಫಾರಸ್ಸನ್ನು ಮಾಡಿದ್ದಾರೆ ಆ ವಿಚಾರ. ಮಾನ್ಯ ಗೋಪಾಲಗೌಡರು ಈ ವಿಚಾರ ಪ್ರಸ್ತಾಪ ಮಾಡಿದರು. ಹಿಂದೊಮ್ಮೆ ಪ್ರಶ್ನೋತ್ತರ ಕಾಲದಲ್ಲಿ ಸರಕಾರದ ನಿಲುವನ್ನು ಹೇಳಿದ್ದೇನೆ. ಇಂದು ಈ ಒಂದು ಸಮಸ್ಯೆ ಕೇವಲ ಮೈಸೂರು ರಾಜ್ಯದ ಸಮಸ್ಯೆಯಲ್ಲ. ಇದು ಎಲ್ಲ ರಾಜ್ಯಗಳ ಕೇಂದ್ರ ಸರಕಾರದ ಸಮಸ್ಯೆಯಾಗಿದೆ. ಆದುದರಿಂದ ಇದನ್ನು ಬಿಡಿಸುವಾಗ ಇದರ ಪರಿಹಾರ ಹುಡುಕುವಾಗ ಇಡೀ ರಾಷ್ಟ್ರದ ಪರಿಸ್ಥಿತಿ ಒಂದೇ ರೀತಿಯಾಗಿ ಆದರೇನೇ ಅದು ಸಾಧ್ಯ, ಒಂದೇ ರಾಜ್ಯ ಸರಕಾರಕ್ಕೆ ಅದು ಸಾಧ್ಯವಾಗುವುದಿಲ್ಲ ಎಂದು ಪುನಃ ಹೇಳ ಬಯಸುತ್ತೇನೆ. ಈ ವರ್ಷದ ಪ್ರಾರಂಭದಲ್ಲಿ ಅಥವಾ 1966-67ನೇ ಇಸವಿಯಲ್ಲಿ ತೆಗೆದುಕೊಂಡರೆ ಬಜೆಟ್ಟಿನಲ್ಲಿ ತುಟ್ಟಿ ಭತ್ಯ ಏರಿದೆ. ತುಕೋಳ ಕಮಿಷನ್ನಿನವರು ಒಂದು ತಾತ್ಕಾಲಿಕ ಶಿಫಾರಸ್ಸು ಕೊಟ್ಟದ್ದನ್ನು ಸ್ವೀಕಾರ ಮಾಡಿ ತುಟ್ಟಿ ಭತ್ಯ ಹೆಚ್ಚಿಸಿ ಕೊಟ್ಟದ್ದನ್ನು ಎರಡೂ ಸೇರಿಸಿದರೆ ಪ್ರತಿ ವರ್ಷಕ್ಕೆ ಸುಮಾರು 6 ಕೋಟಿ ರೂಪಾಯಿಯಷ್ಟು ಹೆಚ್ಚು ಖರ್ಚು ಸರಕಾರಕ್ಕೆ ಬರುತ್ತದೆ. ಗಜೇಂದ್ರಗಡಕರ ಕಮಿಷನ್ ಅವರು ಶಿಫಾರಸ್ಸು ಮಾಡಿದ್ದಾರೆ ಆ ಶಿಫಾರಸ್ಸು ಅನ್ವಯ ಮಾಡಬೇಕೆಂದು ನಾವು ಏನಾದರೂ ಒಂದು ನಿರ್ಧಾರಕ್ಕೆ ಬಂದರೆ ಒಂದು ವರ್ಷಕ್ಕೆ 8 ಕೋಟಿ ರೂಪಾಯಿಯಷ್ಟು ಹೆಚ್ಚು ಖರ್ಚು ಸರಕಾರಕ್ಕೆ ಬರುತ್ತದೆ. ಅಂದರೆ ಒಟ್ಟು ಪ್ರತಿ ವರ್ಷ 14 ಕೋಟಿ ರೂಪಾಯಿ ಬರುವ ನಾಲ್ಕು ವರ್ಷ ಅಂದರೆ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬರುವ ನಾಲ್ಕು ವರ್ಷಗಳಲ್ಲಿ ಪ್ರತಿ ವರ್ಷ 14 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇದು ಬಹಳ ಕ್ಲಿಷ್ಟವಾದ ಸಮಸ್ಯೆ. ನಮಗೆ ಇರತಕ್ಕಂಥ ಬಹಳ ಮಿತವಾದ ಸಂಪನ್ಮೂಲಗಳ ಉತ್ಪನ್ನದಿಂದ ಇದನ್ನು ನಿರ್ವಹಿಸತಕ್ಕಂಥಾದ್ದು ಕಷ್ಟಸಾಧ್ಯ ಎಂಬುದನ್ನು ಮಾನ್ಯ ಸದಸ್ಯರಿಗೆ ಇನ್ನೂ ವಿವರವಾಗಿ ಹೇಳಬೇಕಾದ ಅಗತ್ಯವಿಲ್ಲ. ಮೈಸೂರು ಸರಕಾರದವರು ಈ ಒಟ್ಟು ವೇಜ್‌ಫ್ರೀಜ್, ಪ್ರೈಸ್ ಫ್ರೀಜ್, ಎಂದರೆ ಸಂಬಳ ಮತ್ತು ಬೆಲೆಗಳ ಸ್ತಂಭನ ಎಷ್ಟರಮಟ್ಟಿಗೆ ಜಾರಿಗೆ ತರುವುದಕ್ಕೆ ಸಾಧ್ಯ ಎಂಬ ಸೂಚನೆಯನ್ನು ಕೇಂದ್ರ ಸರಕಾರಕ್ಕೆ ಮಾಡಿದೆ. ಕೇಂದ್ರ ಸರಕಾರ ಅದನ್ನು ಯೋಚನೆ ಮಾಡುತ್ತಿದೆ. ಇದು ಎಷ್ಟರ ಮಟ್ಟಿಗೆ ವ್ಯವಹಾರ್ಯವಾದುದು ಯೋಚಿಸಬೇಕು. ಏತಕ್ಕೆಂದರೆ ಇದರಲ್ಲಿ ಸೋಷಿಯಲ್ ಜಸ್ಟಿಸ್ ಅಡಕವಾಗಿದೆ. ಎಲ್ಲಿಯವರೆಗೆ ಇರತಕ್ಕಂಥ ಬೆಲೆಯ ಮೇಲೆ ಸಂಪೂರ್ಣವಾಗಿ ಹತೋಟಿ ತರತಕ್ಕಂಥಾದ್ದು ಸಾಧ್ಯವಿಲ್ಲವೋ ಅಲ್ಲಿಯವರೆಗೆ ಸಂಬಳ ಸಮಾನವಾಗುವುದು ಸಾಧ್ಯವಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಆದರ ಇದೊಂದು ವಿಷ ಚಕ್ರ ಇದೇ ರೀತಿ ನಡೆಯಲಿಕ್ಕೆ ಬಿಟ್ಟರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಛಿದ್ರ ಛಿದ್ರವಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಆದುದರಿಂದ ಈ ಸಮಸ್ಯೆಯನ್ನು ಯಾವ ಒಂದು ರೀತಿಯಲ್ಲಿ ಬಗೆಹರಿಸಬೇಕು. ಎಂಬುದರ ಮೇಲೆ ಈ ವರ್ಷದ ಬಜೆಟ್ಟು ಕೂಡ ಸ್ವಲ್ಪಮಟ್ಟಿಗೆ ಅವಲಂಬಿಸಿದೆ ಎಂದು ಹೇಳಲು ಬಯಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ಸದಸ್ಯರು ಅದರಲ್ಲಿಯೂ ಮುಖ್ಯವಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಆರ್ಥಿಕ ಪರಿಸ್ಥಿತಿಯಲ್ಲಿ ಮಿತವ್ಯಯ ಮಾಡತಕ್ಕದ್ದು ಏನು ಸಮರ್ಪಕವಾಗಿದೆ ಎನ್ನುವುದನ್ನು ಹೇಳಿರುವುದಕ್ಕೆ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಎರಡು

ದಿವಸಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬೇಡಿಕೆಗಳ ಮೇಲೆ ಆದಂಥ ಚರ್ಚೆಗೆ ಉತ್ತರ ಕೊಡುತ್ತಾ ಒಂದು ಮಾತನ್ನು ಪ್ರಸ್ತಾಪಿಸಿ ಮುಖ್ಯ ಮಂತ್ರಿಗಳು ವ್ಯಾವಹಾರಿಕವಾಗಿ ಈ ಸರಕಾರ ಏನು ಮಾಡಲಿಕ್ಕೆ ಸಾಧ್ಯವಿದೆ ಎಂದು ಹೇಳಿದರು. ಆಡಳಿತ ಸುಧಾರಣೆ ಕೂಡ ಸುಲಭವಾದ ವಿಚಾರವಲ್ಲ. ಈ ಮಾತು ಇಲ್ಲಿ ಅಷ್ಟೊಂದು ಸುಸಂಗತವಾಗಲಾರದು. ಆ ಮಾತನ್ನು ಎತ್ತಿರುವುದರಿಂದ ಈ ಬಗ್ಗೆ ಎರಡು ಮಾತು ಹೇಳಿದರೆ ಅಧ್ಯಕ್ಷರು ಮನ್ನಿಸಬೇಕು. ಈ ಆಡಳಿತ ಯಂತ್ರವು ಸ್ವಾತಂತ್ರ್ಯ ಬಂದಮೇಲೆ ನಮ್ಮದೇ ಆಗಿ ನಿರ್ಮಾಣವಾದಂಥ ಯಂತ್ರವಲ್ಲ. ದೇಶದ ಪರಿಸ್ಥಿತಿಗೆ ಅನುಕೂಲವಾದಂಥ ಅಗತ್ಯವಾದ ಅನುಕೂಲಕ್ಕಾಗಿ ಆಡಳಿತ ಯಂತ್ರ ಸಿದ್ಧ ಮಾಡಿದ್ದೇವೆ. ಆದರೂ ನಾವು ಹಿಂದೆ ನಡೆಯುತ್ತಾ ಇದ್ದ ಬ್ರಿಟಿಷರ ಆಡಳಿತ ಯಂತ್ರವನ್ನು ನಾವು ಬಳುವಳಿಯಾಗಿ ಇನ್‌ಹೆರಿಟ್ ಮಾಡಿದ್ದೇವೆ. ಸ್ವಾತಂತ್ರ್ಯ ಬಂದಮೇಲೆ ಕೆಲವೊಂದು ಬದಲಾವಣೆ ಮಾಡತಕ್ಕಂಥ ಪ್ರಯತ್ನ ನಡೆದಿದೆ. ದುರಾದೃಷ್ಟದಿಂದ ಇದಕ್ಕೆ ಅನೇಕ ಕಾರಣ ಹೇಳಬಹುದು. ವಿವರವಾಗಿ ಹೇಳಬೇಕಾದ ಅಗತ್ಯವಿಲ್ಲ. ಯಾವ ಒಂದು ಕಾರ್ಯದಕ್ಷತೆ ಯಾವ ಪ್ರಮಾಣದಲ್ಲಿ ಆಡಳಿತದಲ್ಲಿ ಇರಬೇಕೋ ಆ ಮಟ್ಟದಲ್ಲಿ ಈ ಆಡಳಿತದಲ್ಲಿ ಇಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಮೈಸೂರು ಸರ್ಕಾರದವರು ಕಳೆದ ಎರಡು ಮೂರು ತಿಂಗಳುಗಳಲ್ಲಿ ಈ ಬಗ್ಗೆ ಬಹಳಷ್ಟು ವಿಚಾರ ಮಾಡಿದ್ದೇವೆ. ಕೆಲವು ದಿವಸಗಳ ಹಿಂದೆ ಈ ವರ್ಷ ಆಡಳಿತ ಎಷ್ಟರಮಟ್ಟಿಗೆ ಖರ್ಚು ಮಾಡಬಹುದು, ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಎಷ್ಟರಮಟ್ಟಿಗೆ ಖೋತಾ ಮಾಡಬಹುದು ಪರಿಶೀಲಿಸಿ ಅವರ ಬಗ್ಗೆ ಬೇಡಿಕೆ ಸಭೆಯ ಮುಂದೆ ಇಟ್ಟಿದ್ದೇವೆ. ಈಗ ಇದು ಕೊನೆಯ ಮಾತು ಅಲ್ಲ. ಆದಾಗ್ಯೂ ಹೆಚ್ಚಿನ ಸುಧಾರಣೆ ಮಾಡತಕ್ಕಂಥ ಮನಸ್ಸು ಮಾಡತಕ್ಕಂಥ ಪ್ರಯತ್ನ ಮೈಸೂರು ಸರಕಾರಕ್ಕೆ ಇದೆ ಎಂದು ಹೇಳಲು ಬಯಸುತ್ತೇನೆ. ನಾನು ಯಾವ ಒಂದು ವಿಚಾರವನ್ನು ಕೇಂದ್ರ ಸರಕಾರದವರು ನೇಮಿಸಿದಂಥ ಆಡಳಿತ ಸುಧಾರಣಾ ಆಯೋಗದವರು ಒಂದು ವರದಿಯನ್ನು ಒಪ್ಪಿಸುವ ಕಾಲದಲ್ಲಿ ತರಾತುರಿಯಾಗಿ ನಿರ್ಣಯ ತೆಗೆದುಕೊಳ್ಳಕೂಡದು ಎಂದು ಮೈಸೂರು ಸರಕಾರ ಕ್ರಮ ತೆಗೆದುಕೊಂಡಿಲ್ಲ. ಕೇಂದ್ರ ಸರಕಾರ ನೇಮಿಸಿದಂಥ ಆಯೋಗದಿಂದ ಯಾವ ಶಿಫಾರಸ್ಸು ಬರುತ್ತದೆ ನಾವು ಕಾದು ನೋಡೋಣ. ಆ ಆಯೋಗದವರು ತಮ್ಮ ಕಕ್ಷೆಯಲ್ಲಿ ಕೇಂದ್ರ ಸರಕಾರದ ಆಡಳಿತದಷ್ಟೇ ಅಲ್ಲದೆ ರಾಜ್ಯ ಸರಕಾರದ ಆಡಳಿತ ಅಷ್ಟೇ ಅಲ್ಲದೆ ಜಿಲ್ಲಾ ಮಟ್ಟದಲ್ಲಿ ಆಡಳಿತ ತೆಗೆದುಕೊಂಡಿದ್ದಾರೆ. ಆದುದರಿಂದ ಕೂಲಂಕಷವಾಗಿ ಅವರು ಪರಿಶೀಲನೆ ಮಾಡಿದ ಮೇಲೆ ಅವರ ಅಭಿಪ್ರಾಯ ಏನು ಬರುತ್ತದೆ ಅದು ನಮಗೆ ಒಪ್ಪಿಗೆಯಾಗಿದ್ದರೆ, ನಮಗೆ ನ್ಯಾಯವಾಗಿದ್ದರೆ, ಆದರಿಂದ ನಮ್ಮ ಪದ್ಧತಿ ಸುಧಾರಣೆಯಾಗಬಹುದು ಎನ್ನತಕ್ಕ ವಿಶ್ವಾಸ ನಮ್ಮಲ್ಲಿ ಆಗಿದ್ದರೆ ನಾವು ಅದನ್ನು ಸ್ವೀಕಾರಮಾಡಬಹುದು. ಅದಿಲ್ಲದೆ ಇದ್ದರೆ ಬೇರೆ ಒಂದು ಮಾರ್ಗವನ್ನು ಹುಡುಕಬೇಕು.

ಮಾನ್ಯ ಹುಚ್ಚಮಾಸ್ತಿಗೌಡರು ಟೆಕ್ನಿಕಲ್ ಆಫೀಸರ್ ಸೆಕ್ರೆಟೇರಿಯಟ್‌ನಲ್ಲಿ ಇರತಕ್ಕುದರ ಅಗತ್ಯವೇನು ಎಂದು ಕೇಳಿದರು. ಚೀಫ್ ಇಂಜನಿಯರ್ ದರ್ಜೆಯವರು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಜಾಯಿಂಟ್ ಸೆಕ್ರೆಟರಿಯಾಗಿ ಅಥವಾ ಇನ್ನು ಬೇರೆ ರೀತಿಯ ಟೆಕ್ನಿಕಲ್ ಆಫೀಸರ್ ಸೆಕ್ರೆಟೇರಿಯಟ್‌ನಲ್ಲಿ ಇರತಕ್ಕುದರ ಅಗತ್ಯವೇನು ಎಂದು ಕೇಳಿದರು. ಒಂದು ಅಭಿಪ್ರಾಯದಲ್ಲಿ ಸೆಕ್ರೆಟೇರಿಯಟ್‌ನಲ್ಲಿ ಎರಡು ಭಾಗವಿದೆ. ಒಂದು Secretariat as such ಬೇರೆ ಬೇರೆ ಇಲಾಖೆಗಳಿರುತ್ತವೆ ಮತ್ತು ಪ್ರತಿಯೊಂದು ಇಲಾಖೆಗೂ ಒಬ್ಬೊಬ್ಬ ಸೆಕ್ರೆಟರಿ ಇರುತ್ತಾರೆ, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ ಇರುತ್ತದೆ. ಅದರಂತೆ ಮತ್ತೊಂದು ಸೆಕ್ರೆಟರಿಯಟ್ ಹೊರಗಡೆ ಡಿಪಾರ್ಟ್‌ಮೆಂಟಲ್ ಹೆಡ್ ಎಂದು ಇರುತ್ತಾನೆ. ಟೆಕ್ನಿಕಲ್ ಡಿಪಾರ್ಟ್‌ಮೆಂಟ್ ಆಗಲೀ, ನಾನ್ ಟೆಕ್ನಿಕಲ್ ಡಿಪಾರ್ಟ್‌ಮೆಂಟ್ ಆಗಲೀ, ಯಾವುದೇ ಒಂದು ಡ್ರಾಫ್ಟ್ ಅಥವಾ ಯಾವುದೇ ಒಂದು ಪ್ರಪೋಸಲ್ ಸರ್ಕಾರಕ್ಕೆ ಬರುವಾಗ ಅದು ಮೊಟ್ಟಮೊದಲಿಗೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಹತ್ತಿರ ಹೋಗುತ್ತದೆ. ಆತನು ಅದನ್ನು ಸಿಫಾರಸು ಮಾಡಿದರೆ ಆವಾಗ ಅದು ಸೆಕ್ರೆಟೇರಿಯಟ್ಟಿಗೆ ಬರುತ್ತದೆ. ಸ್ರೆಕೆಟೇರಿಯಟ್‌ನಲ್ಲಿ ಪುನಃ ಅದನ್ನು ಪರಿಶೀಲನೆ ಮಾಡುತ್ತಾರೆ. ಅದರಲ್ಲಿ ಕೆಲವು ತರ್ಕಬದ್ಧವಾಗಿರುವುದಿಲ್ಲ. ಉದಾಹರಣೆಗೆ ಹೆಲ್ತ್ ಡಿಪಾರ್ಟ್‌ಮೆಂಟಿನಿಂದ ಡೈರೆಕ್ಟರ್ ಆಫ್ ಹೆಲ್ತ್ ಸರ್ವಿಸಸ್ ಅವರು ಒಂದು ಪ್ರಪೋಸಲ್ ಕಳಿಸುತ್ತಾರೆ. ಆಗ ಸೆಕ್ರೆಟೇರಿಯಟ್‌ನಲ್ಲಿರತಕ್ಕ ಒಬ್ಬ ಸೆಕ್ಷನ್ ಆಫೀಸರ್ ಅಥವಾ ಫಸ್ಟ್ ಡಿವಿಜನ್ ಕ್ಲಾರ್ಕ್ ಅದರ ಮೇಲೆ ಕೆಲವೊಂದು ನೋಟಿಂಗ್ ಮಾಡುತ್ತಾನೆ. ಆ ಮೇಲೆ ಅದು ಅಂಡರ್ ಸೆಕ್ರೆಟರಿ ಹತ್ತಿರ ಹೋಗಿ, ಸೆಕ್ರೆಟರಿ ಹತ್ತಿರ ಹೋಗಿ ಕೊನೆಗೆ ಮಂತ್ರಿಗಳ ಹತ್ತಿರ ಬರುತ್ತದೆ. ಬಹುಶಃ ನೂರಕ್ಕೆ ತೊಂಬತ್ತರಷ್ಟು ವಿಚಾರಗಳಲ್ಲಿ ಸೆಕ್ಷನ್ ಆಫೀಸರ್ ಯಾವ ನೋಟ್ ನೀಡುತ್ತಾನೆ ಹೆಚ್ಚು ಕಡಮೆ ಅದೇ ನೋಟ್ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳತಕ್ಕ ಪದ್ಧತಿ ಇವತ್ತು ಇದೆ. ನಮ್ಮ ವಿಚಾರ ಎಂದರೆ ಸರ್ಕಾರದ ವಿಚಾರ, ಕೆಲವು ದಿನಗಳ ಹಿಂದೆ ಈ ಒಂದು ಡ್ಯೂಯಲ್ ಸಿಸ್ಟಂ ಏನಿದೆ, ಒಂದು ಕಡೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್, ಮತ್ತೊಂದು ಕಡೆಗೆ ಸೆಕ್ರೆಟೇರಿಯಟ್‌ನಲ್ಲಿ

(ಶ್ರೀ ರಾಮಕೃಷ್ಣ ಹೆಗಡೆ)

ಕೆಲಸ ಮಾಡತಕ್ಕ ಸಿಬ್ಬಂದಿ, ಸೆಕ್ರೆಟರಿಯಿಂದ ಕೆಳಗಡೆ, ಇದನ್ನು ತೆಗೆದು ಹಾಕಿ ಎರಡನ್ನೂ ಒಂದನ್ನೇ ಮಾಡಿದರೆ ಬಹುಶಃ ಸ್ವಲ್ಪಮಟ್ಟಿಗೆ ಖರ್ಚು ಕಡಮೆ ಆಗಬಹುದು, ಕಾರ್ಯ ದಕ್ಷತೆ ಬೆಳೆಯಬಹುದು ಎನ್ನುವ ಆಶಯವಿದೆ. ಆದರೆ ಅದರ ಬಗ್ಗೆ ಯಾವ ನಿರ್ಣಯವನ್ನೂ ಸರ್ಕಾರ ಮಾಡಿಲ್ಲ. ಕೇಂದ್ರ ಸರ್ಕಾರದವರು ನೇಮಿಸಿರುವ ಆಡಳಿತ ಸುಧಾರಣಾ ಆಯೋಗದ ವರದಿ ಬರುವವರೆಗೂ ಕಾದು ನೋಡೋಣ ಎನ್ನುವ ಉದ್ದೇಶದಿಂದ ಆ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಹುಚ್ಚಮಾಸ್ತಿ ಗೌಡರಿಗೆ ಇಷ್ಟು ಮಾತ್ರ ಹೇಳಬಲ್ಲೆ. ಆ ವಿಚಾರ ಸರ್ಕಾರದ ಮನಸ್ಸಿನಲ್ಲಿದೆ.

ಇನ್ನು ಮಾನ್ಯ ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿದ ನಿಸ್ಸಹಾಯಕತೆಯ ಬಗ್ಗೆ ಬಹಳ ಕಟುವಾಗಿ ಟೀಕೆಯಾಯಿತು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ವಾಸ್ತವವಾಗಿರತಕ್ಕ ಒಂದು ಮಾತು. ಈಗ ಅಧಿಕಾರವನ್ನು ನಡೆಸಲಿಕ್ಕೆ ಯಾವ ಸರ್ಕಾರವೇ ಬರಲಿ, ಯಾವ ಅಧಿಕಾರಿ ಸೋಮಾರಿ, ಯಾವ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಾನೆ ಅವನಿಗೆ ಶಿಕ್ಷೆ ಆಗಲೇ ಬೇಕು. ಇದು ಆಡಳಿತ ಧರ್ಮ. ಆದರೆ ಇಂದು ನಾವು ಹಾಕಿಕೊಂಡಿರತಕ್ಕ ನಿಯಮಗಳು ಮತ್ತು ರಾಜ್ಯಾಂಗದ ಪ್ರಕಾರ ಅವರಿಗೆ ಸಿಕ್ಕಿರತಕ್ಕ ಸೌಲಭ್ಯಗಳು ಯಾವುದೇ ನೌಕರರಿಗೆ ಸಿಕ್ಕಿಲ್ಲ. ಈ ದಿಸೆಯಲ್ಲಿ ನಾವು ವಿಚಾರ ಮಾಡಿ ನೋಡಿದರೆ ಒಂದು ಸರ್ಕಾರದ ನಿರ್ಣಯವನ್ನು ಜಾರಿಯಲ್ಲಿ ತರಬೇಕಾದರೆ ಬಹಳ ಕಷ್ಟವನ್ನು ನಾವು ಎದುರಿಸಬೇಕಾಗುತ್ತದೆ. ಎಂದಮಾತ್ರಕ್ಕೆ ಸರ್ಕಾರಕ್ಕೆ ತಪ್ಪು ಮಾಡಿದವರಿಗೆ ದಂಡನೆ ಮಾಡಕೂಡದು ಎನ್ನುವ ಇಚ್ಛೆ ಇದೆ ಎಂದು ತಿಳಿಯಕೂಡದೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ತಪ್ಪಿತಸ್ಥರಿಗೆ ಒಂದು ತಿಂಗಳ ಅವಧಿ ಕೊಡಬೇಕಾದ್ದಿದೆ. ಅನೇಕ ಸಂದರ್ಭ ಗಳಲ್ಲಿ ಒಬ್ಬ ಸರ್ಕಾರಿ ನೌಕರನನ್ನು ಅತನ ಮೇಲೆ ಯಾವುದೇ ದೂರು ಬಂದಿದೆ ಎನ್ನುವ ಆಧಾರದ ಮೇಲೆ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ವರ್ಗ ಮಾಡಿದರೆ, ವರ್ಗವನ್ನು ಸ್ಟೇ ಮಾಡಿ ಎಂದು ಕೋರ್ಟಿನಿಂದ ಸರ್ಕಾರಕ್ಕೆ ಆದೇಶ ಬಂದಂಥ ಉದಾಹರಣೆಗಳು ಅನೇಕ ಉಂಟು. ಆದು ದರಿಂದ ಕೇಂದ್ರ ಸರ್ಕಾರದವರು ಕೂಡ ಇವತ್ತು ಅಪರಾಧ ಮಾಡಿದಂಥ ಸರ್ಕಾರಿ ನೌಕರರು ಯಾರು ಇರುತ್ತಾರೆ ಅಂಥವರಿಗೆ ಆದಷ್ಟು ತೀವ್ರ ಶಿಕ್ಷೆ ಮಾಡತಕ್ಕ ಕ್ರಮವನ್ನೂ ಯೋಚನೆ ಮಾಡುತ್ತಿದ್ದಾರೆ. ಅದಕ್ಕೂ ಕೂಡ ಸ್ವಲ್ಪ ಕಾಲ ಕಾಯಬೇಕಾದ ಪ್ರಸಂಗ ಬರಬಹುದು.

ಮಾನ್ಯ ಗೋಪಾಲಗೌಡರು ಉದ್ಯೋಗದ ನೀತಿಯ ಬಗ್ಗೆ ಮತ್ತು ನಮ್ಮ ಮೈಸೂರು ರಾಜ್ಯ ದಲ್ಲಿ ಕೆಲವೊಂದು ಉದ್ಯಮಗಳು ನಡೆಯುತ್ತಿರುವ ರೀತಿಯ ಬಗ್ಗೆ ಬಹಳ ಮನಸ್ಸಿನಲ್ಲಿ ನೊಂದು ಕೊಂಡು ಮಾತನಾಡಿದ್ದಾರೆ. ಅವರು ಹೇಳಿದ ವಿಚಾರಗಳಲ್ಲಿ ಅನೇಕ ವಿಚಾರಗಳನ್ನು ನಾನು ಒಪ್ಪುತ್ತೇನೆ, ತತ್ವಶಃ ಒಪ್ಪುತ್ತೇನೆ. ಅದೇನೆಂದರೆ ಇಂದು ನಮ್ಮ ಸರ್ಕಾರದ ಹಣವನ್ನು ಈ ಔದ್ಯಮಿಕ ಕ್ಷೇತ್ರದಲ್ಲಿ ಎಷ್ಟೊಂದು ಬಂಡವಾಳದ ರೂಪದಲ್ಲಿ ಹಾಕಿದ್ದೇವೆಯೋ ಅದಕ್ಕೆ ಸರಿಯಾದ ಪ್ರತಿಫಲ ಇವತ್ತು ನಮಗೆ ಸಿಕ್ಕುತ್ತಿಲ್ಲ. ಅದು ಒಪ್ಪಿಕೊಳ್ಳತಕ್ಕ ವಿಚಾರ. ಅದರಲ್ಲಿ ಮುಚ್ಚುಮರೆ ಇಲ್ಲ. ಸುಮಾರು 22 ರಿಂದ 23 ಕೋಟಿ ರೂಪಾಯಿಗಳವರೆಗೆ ಸರ್ಕಾರದ ಬಂಡವಾಳ ಬೇರೆ ಬೇರೆ ಉದ್ಯಮಗಳಲ್ಲಿ ತೊಡಗಿದೆ. ಅದರಿಂದ ಬರತಕ್ಕ ಉತ್ಪನ್ನ, ಡಿವಿಡೆಂಡ್ ರೂಪದಲ್ಲಿ ಬರುತ್ತಿದೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡಿ ನೋಡಿದಾಗ ಅದು ಕೇವಲ ಹೆಸರಿಗೆ ಮಾತ್ರ ಎಂದರೆ 36 ಲಕ್ಷ ರೂಪಾಯಿಗಳಷ್ಟು ಮಾತ್ರ ಇದರಿಂದ ಬರುತ್ತಿದೆ. ಇದಕ್ಕೆ ಕಾರಣವೇನು ? ಕಾರಣ ನನ್ನ ದೃಷ್ಟಿಯಲ್ಲಿ ಎರಡು. ಮೊದಲನೆಯದು ಯಾವ ಯಾವ ಉದ್ಯೋಗಗಳಲ್ಲಿ ಯಾವ ಯಾವ ಕಾರ್ಖಾನೆ ಗಳಲ್ಲಿ ನಾವು ಈ ಬಂಡವಾಳವನ್ನು ತೊಡಗಿಸಿದ್ದೇವೆ ಅವುಗಳಲ್ಲಿ ಕೆಲವು ಉದ್ಯೋಗಗಳು ಇನ್ನೂ ಪ್ರತಿಫಲ ಕೊಡತಕ್ಕ ಮಟ್ಟಕ್ಕೆ ಬಂದಿಲ್ಲ. ಇನ್ನು ಒಂದು ವರ್ಷದಲ್ಲಿ, ಎರಡು ವರ್ಷದಲ್ಲಿ ಹೆಚ್ಚೆಂದರೆ ಮೂರು ವರ್ಷದಲ್ಲಿ ಈ ಉದ್ಯಮಗಳು ಒಂದು ಮಟ್ಟಕ್ಕೆ ಬರುತ್ತವೆ ಮತ್ತು ಅದಾದ ಮೇಲೆ ಅಲ್ಲಿ ಹಾಕಿದ ಬಂಡವಾಳಕ್ಕೆ ಪ್ರತಿಫಲ ಸಿಕ್ಕುತ್ತದೆ. ಮತ್ತೊಂದು ಕಾರಣವೇನೆಂದರೆ, ಕೆಲವೊಂದು ಉದ್ಯಮಗಳು ಲಾಭ ಮಾಡುತ್ತಿಲ್ಲ, ಹಾನಿಯನ್ನು ಮಾಡುತ್ತಿವೆ. ಮಾನ್ಯ ಸದಸ್ಯರು ಹೇಳಬಹುದು, ನೀವು ಸರ್ಕಾರದಿಂದ ನಡೆಸತಕ್ಕ ಉದ್ಯಮಗಳನ್ನು ಚೆನ್ನಾಗಿ ನಡೆಸುತ್ತಿಲ್ಲ, ಅಲ್ಲಿ ಪ್ರಾಮಾಣಿಕತೆ ಇಲ್ಲ, ಅಲ್ಲಿ ದಕ್ಷತೆ ಇಲ್ಲ ಎಂದು. ಈ ಮಾತನ್ನು ಹೇಳತಕ್ಕದ್ದು ಬಹಳ ಸುಲಭ. ಮಾನ್ಯ ಗೋಪಾಲ ಗೌಡರೇ ಆಗಲೀ, ಇನ್ನು ಆ ಕಡೆ ಕುಳಿತಂಥ ಯಾವ ಮಾನ್ಯ ಸದಸ್ಯರೇ ಆಗಲೀ ಮುಂದೆ ಬಂದರೆ ಒಂದೆರಡು ಉದ್ಯಮಗಳನ್ನು ಅವರ ಮೇಲ್ವಿಚಾರಣೆಯಲ್ಲಿ ನಡೆಸಲಿಕ್ಕೆ ನಾವು ಸಿದ್ಧರಿದ್ದೇವೆ. ಹುಬಳ್ಳಿ ಕೋ-ಆಪರೇಟಿವ್ ಟೆಕ್ಸ್ ಟೈಲ್ಸ್ ಮಿಲ್, ಕೊಳ್ಳೇಗಾಲದಲ್ಲಿರುವ ನಮ್ಮ ಸಿಲ್ಕ್ ಫಿಲೇಚರ್ ಇಂಥವುಗಳನ್ನು ನಡೆಸಲಿಕ್ಕೆ ನಾನು ಮಾನ್ಯ ಗೋಪಾಲಗೌಡರಿಗೆ ಆಮಂತ್ರಣ ಕೊಡುತ್ತೇನೆ. ಒಂದು ವರ್ಷ ಕಾಲ ಕೊಳ್ಳೇಗಾಲ ಸಿಲ್ಕ್ ಫಿಲೇಚರ್‌ನ್ನು ನಡೆಸಲಿಕ್ಕೆ ಅವರಿಗೆ ಏನು ಅಧಿಕಾರ ಬೇಕೋ ಅದನ್ನೆಲ್ಲಾ ಕೊಡೋಣ. ಅದನ್ನು ಮೊದಲು ಉತ್ತಮಗೊಳಿಸಲಿ. ಅನೇಕ ಸಂಗತಿಗಳು

ಅದರಲ್ಲಿರುತ್ತವೆ. ಅವನ್ನು ನಾವು ಮರೆಯಬಾರದು. ಟೆಕ್ಸ್‌ಟೈಲ್ ಇಂಡಸ್ಟ್ರಿ ವಿಚಾರ ಹೇಳುವುದಾದರೆ ಗುಲ್ಬರ್ಗ ಎಂ. ಎಸ್. ಕೆ. ಮಿಲ್ಸ್ ನಿಂತು ಹೋಯಿತು. ಅದನ್ನು ಸರ್ಕಾರದವರು ಮುಚ್ಚಬೇಕೆಂದು ತೀರ್ಮಾನ ಮಾಡಿದ್ದಾರೆ. ಇದಕ್ಕಾಗಿ ಟೆಕ್ಸ್‌ಟೈಲ್ಸ್ ಓಪನ್ ಮಾಡುವುದಿಲ್ಲ. ಮಾನ್ಯ ರಾಜಯ್ಯ ಶೆಟ್ಟರಿಗೆ ವ್ಯಾಪಾರದ ಅನುಭವ ಇರಬಹುದು. ಇವತ್ತಿನ ದಿವಸ ಟೆಕ್ಸ್‌ಟೈಲ್ ಇಂಡಸ್ಟ್ರಿ ಯಾವ ಒಂದು ಸಂಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತದೆ ಎಂಬುದು ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಕೇವಲ ಒಂದು ಕೈಗಾರಿಕೆಯಲ್ಲ; ದೇಶದಲ್ಲಿ 40—45 ಕೈಗಾರಿಕೆಗಳು ಮುಚ್ಚಿ ಹೋಗಿವೆ. ಮತ್ತು ಅಲ್ಲಿರತಕ್ಕ ಯಂತ್ರೋಪಕರಣಗಳು ಔಟ್ ಆಫ್ ಡೇಟ್ ಆಗಿವೆ. ಇವತ್ತಿನ ದಿವಸ ಕಾಸ್ಟ್ ಆಫ್ ಪ್ರೊಡಕ್ಷನ್ ಹೆಚ್ಚಾಗಿದೆ. ಅದು ಜೀವಂತವಾಗಿರುವುದಕ್ಕೆ ಸಾಧ್ಯವಿಲ್ಲ. ಇವತ್ತು ಹೊಸ ಶೋಧನೆಗಳ ಮೂಲಕ ಹೆಚ್ಚು ಉತ್ಪಾದಿಸುವುದಕ್ಕೆ ಮಾರ್ಗ ಮಾಡಿದರೆ, ಸಾಧ್ಯ. ಮಾನ್ಯ ಶ್ರೀ ಗೋಪಾಲ ಗೌಡರು, ಕೃಷ್ಣರಾಜೇಂದ್ರಮಿಲ್ಲಿನ ವಿಚಾರ ಪ್ರಸ್ತಾಪ ಮಾಡಿದರು. ಅದರಲ್ಲಿ ಸರ್ಕಾರದ ಹಣವಿಲ್ಲ. ಮೈಸೂರಿನಲ್ಲಿರತಕ್ಕ ಟೆಕ್ಸ್‌ಟೈಲ್ ಮಿಲ್ ಮೂರು ವರ್ಷದ ಹಿಂದೆ ಬಹಳ ನಷ್ಟದಿಂದ ನಡೆಯುತ್ತಿತ್ತು. ಈಗ ಕಲ್ಕತ್ತಾದ ಒಬ್ಬರು ನಡೆಸುತ್ತಿದ್ದಾರೆ. ಇವತ್ತಿನ ದಿವಸ ಅದನ್ನು ಒಳ್ಳೆಯ ಲಾಭದ ಮೇಲೆ ನಡೆಸುತ್ತಿದ್ದಾರೆ. ಯಾರಾದರೂ ಹೋಗಿ, ಯಾವುದಾದರೂ ಕೈಗಾರಿಕೆಯನ್ನು ನಡೆಸುತ್ತೇವೆಂದು ಹೇಳಿದರೆ, ಅದು ಜಾಣತನದ ಮಾತಲ್ಲ.

ಈ ಒಂದು ವಿಷಯದಲ್ಲಿ ನಾನು ಹೇಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಆಗಬೇಕು. ಹೊಸ ಕೈಗಾರಿಕೆಗಳು ಆಗದೆ ನಮ್ಮ ಜನರಿಗೆ ಉದ್ಯೋಗ ಸಿಗುವುದಿಲ್ಲ; ಮತ್ತು ಸರ್ಕಾರಕ್ಕೆ ಉತ್ಪಾದನೆಯಾಗುವುದಿಲ್ಲ. ಮತ್ತು ಎಲ್ಲಾ ಕೈಗಾರಿಕೆಗಳನ್ನೂ ಸರ್ಕಾರವೇ ಮಾಡಬೇಕೆಂದು ಕೆಲವರು ಹೇಳುತ್ತಿದ್ದಾರೆ. ಸರ್ಕಾರದ ನೀತಿ ಏನೆಂದರೆ, ಇಲ್ಲಿ ಬಂದ ಉದ್ಯಮಿಗಳಿಗೆ ಎಷ್ಟುಮಟ್ಟಿಗೆ ಸಾಧ್ಯವೋ, ಅಷ್ಟು ಮಟ್ಟಿಗೆ ಸಹಾಯ ಮಾಡಬೇಕು. ಮತ್ತು ಅವುಗಳ ಮೇಲೆ ಕೆಲಸಗಾರರ ಹಿತದೃಷ್ಟಿಯಿಂದ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಎಷ್ಟು ನಿಯಂತ್ರಣ ಇಟ್ಟುಕೊಳ್ಳಬೇಕೋ, ಅಷ್ಟೇ ನಿಯಂತ್ರಣ ಇಟ್ಟುಕೊಳ್ಳಬೇಕು. ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರದವರು ಕೈಗೊಂಡಂತಹ ಇಂಡಸ್ಟ್ರಿಯಲ್ ಪಾಲಿಸಿ, 1957 ರಲ್ಲಿ ಆಯಿತು. ಅದಕ್ಕೆ ಪಾರ್ಲಿಮೆಂಟಿನ ಒಪ್ಪಿಗೆ ಕೂಡ ಆಗಿದೆ. ಅದರ ಪ್ರಕಾರ ಕೀ ಇಂಡಸ್ಟ್ರಿಸ್ ಅದು ಪಬ್ಲಿಕ್ ಸೆಕ್ಟರಿನಲ್ಲಿ ಇಡಬೇಕು, ಬಾಕಿ ಕೈಗಾರಿಕೆಗಳನ್ನು ಪ್ರೈವೇಟ್ ಸೆಕ್ಟರಿಗೆ ಕೊಡಬೇಕೆಂಬ ನೀತಿ ಇದೆ. ಹಿಂದಿನ ಕಾಲದಲ್ಲಿ ಹಳೆಯ ಮಹಾರಾಜರ ಕಾಲದಲ್ಲಿ ಬಹುಶಃ ಹೊಸ ಉದ್ಯಮಗಳನ್ನು ಸರ್ಕಾರವೇ ಮುಂದಾಳುತನ ವಹಿಸಿ ಮಾಡಿದರು. ಅದಕ್ಕೆ ಕಾರಣ ಬೇರೆ ಇದೆ. ಆದರೆ ಪ್ರತಿಯೊಂದನ್ನೂ ಮಾಡಬೇಕೆಂದರೆ ಸರ್ಕಾರದ ಹತ್ತಿರ ದುಡ್ಡು ಇಲ್ಲ; ಮತ್ತು ಅದನ್ನು ನಡೆಸತಕ್ಕ ನೈಪುಣ್ಯತೆ ಸರ್ಕಾರದ ಸಿಬ್ಬಂದಿಯ ಹತ್ತಿರ ಇರುತ್ತದೆ ಎಂದರೆ, ಅದು ಸರಿಯಾಗಲಾರದು. ಆದ್ದರಿಂದ ಸರ್ಕಾರದ ಉದ್ದೇಶವೇನೆಂದರೆ, ಎಲ್ಲಿಂದಲೇ ಬರಲಿ, ನಮ್ಮ ರಾಜ್ಯದಲ್ಲಿರತಕ್ಕ ನೈಸರ್ಗಿಕ ಸಂಪತ್ತನ್ನು ಉಪಯೋಗಮಾಡಿಕೊಳ್ಳೋಣ, ಆ ಮೇಲೆ ಯಾವ ರೀತಿ, ಕಂಟ್ರೋಲ್ ಮಾಡಬೇಕೆಂದು ಯೋಚಿಸುವ ಸರ್ಕಾರದಲ್ಲಿರತಕ್ಕ ಅಧಿಕಾರ ಸರ್ಕಾರದವರಲ್ಲಿ ಇದ್ದೇ ಇರುತ್ತದೆ. ಮಾನ್ಯ ಗೋಪಾಲ ಗೌಡರು, ಬಾಗಲಕೋಟೆಯ ವಿಚಾರ ಹೇಳಿದರು. ಬಹುಶಃ ಅವರಿಗೆ ಸರಿಯಾದ ಮಾಹಿತಿ ಸಿಕ್ಕಿಲ್ಲವೆಂದು ಕಾಣುತ್ತದೆ. ಅಲ್ಲಿ ಸರಿಯಾದ ಡಿವಿಡೆಂಡ್ ಸಿಕ್ಕಿಲ್ಲವೆಂದು ಹೇಳಿದರು. ನನ್ನ ಹತ್ತಿರ ನಾಲ್ಕು ವರ್ಷದ ಮಾಹಿತಿ ಇದೆ, ಅದನ್ನು ಇಲ್ಲಿ ಓದುತ್ತೇನೆ :

1963 ನೇ ಇಸವಿಯಲ್ಲಿ		73,200	ಡಿವಿಡೆಂಡ್ ನಮಗೆ ಸಿಕ್ಕಿದೆ.
1964	,,	1,07,360	,,
1965	,,	1,17,120	,,
1966	,,	1,18,680	,,

ನಾವು ಹಾಕಿರತಕ್ಕದ್ದು ಕೆಲವೊಂದು ಲಕ್ಷ ಮಾತ್ರ. 9 ಲಕ್ಷ 89 ಸಾವಿರ ಬಂಡವಾಳ ಹಾಕಿದೆ. ನಿಜವಾಗಿ ಹೇಳುವುದಾದರೆ, ಖಾಸಗೀ ಕ್ಷೇತ್ರದಲ್ಲೂ ಇವತ್ತಿನ ದಿವಸ ಡಿವಿಡೆಂಡ್ ಹೆಚ್ಚು ಬರುತ್ತದೆ. ಸರ್ಕಾರ ಒಟ್ಟು ಒಂದು ಕೋಟಿ 73 ಲಕ್ಷ ಬಂಡವಾಳವನ್ನು ಬೇರೆ ಬೇರೆ ಖಾಸಗೀ ಕಾರ್ಖಾನೆಗಳಲ್ಲಿ ಹಾಕಿದೆ. ಅದಕ್ಕೆ ಕಳೆದ ವರ್ಷ ಬಂದಿರತಕ್ಕ ಡಿವಿಡೆಂಡ್ 9 ಲಕ್ಷ 37 ಸಾವಿರ ರೂಪಾಯಿ. ಇಷ್ಟು ಪ್ರಮಾಣದಲ್ಲಿ ಇವತ್ತಿನ ದಿವಸ ಸಿಗುತ್ತದೆ. ಇದನ್ನು ಕೂಡ ಸ್ಪಷ್ಟವಾಗಿ ಹೇಳುತ್ತೇನೆ. ಇಂದು ಉದ್ದಿಮೆಗಳನ್ನು ಹೆಚ್ಚು ಹೆಚ್ಚು ಮಾಡಬೇಕೆಂಬ ಉದ್ದೇಶ ಕೇವಲ ಬಂಡವಾಳ ಹಾಕಿ ಅದಕ್ಕೆ ಡಿವಿಡೆಂಟ್ ತೆಗೆದುಕೊಳ್ಳತಕ್ಕಂಥ ಉದ್ದೇಶ ಮಾತ್ರ ಒಂದೇ ಅಲ್ಲ. ಅಪ್ರತ್ಯಕ್ಷವಾಗಿ ಇನ್ನೂ ಬೇರೆ

(ಶ್ರೀ ರಾಮಕೃಷ್ಣ ಹೆಗಡೆ)

ಪ್ರಯೋಜನ ಸಿಗುತ್ತದೆ. ಕೈಗಾರಿಕೆಗಳು ಹೆಚ್ಚಾದರೆ, ವ್ಯಾಪಾರ ವ್ಯವಹಾರ ಹೆಚ್ಚಾಗುತ್ತದೆ, ಸೇಲ್ಸ್ ಟ್ಯಾಕ್ಸ್ ಬರುತ್ತದೆ, ಬಡ್ಡಿ ಬರುತ್ತದೆ, ಎಲೆಕ್ಟ್ರಿಸಿಟಿ ಡ್ಯೂಟಿ ಬರುತ್ತದೆ, ಅದಲ್ಲದೆ ಇನ್ನೂ ಅನೇಕ ರೀತಿಯ ಪ್ರಯೋಜನವಿದೆ. ಈಗ ಮಿನರ್ವ ಮತ್ತು ಮೈಸೂರು ಮಿಲ್ ನಿಂತು ಹೋಯಿತು. ಅದನ್ನು ಬೇಗನೆ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಅದರಿಂದ ಸರ್ಕಾರಕ್ಕೆ 60 ಲಕ್ಷ ರೂಪಾಯಿ ಹಾನಿಯಾಗಿದೆ. ಎಲೆಕ್ಟ್ರಿಸಿಟಿ ಮತ್ತು ಸೇಲ್ಸ್ ಟಾಕ್ಸ್ ಮತ್ತು ಬೇರೆ ಬೇರೆ ಬಾಬುಗಳಿಂದ ಏನು ಬರುತ್ತದೆ, ಅದು ನಿಂತುಹೋಯಿತು. ಇವತ್ತು 60 ಲಕ್ಷಕ್ಕೆ ಗ್ಯಾರಂಟಿ ಕೊಟ್ಟು ಪ್ರಾರಂಭ ಮಾಡಬೇಕೆಂದು ಮಾಡಿದ್ದೇವೆ. ಅದರಿಂದ ಸರ್ಕಾರದ ನೀತಿ ಈ ವಿಚಾರದಲ್ಲಿ ಯಾವಾಗಲೂ, ಪ್ರಗತಿಪರವಾದ ನೀತಿಯಾಗಿರುತ್ತದೆ. ಇಂದು ಸುಮಾರು 21—23 ಕೋಟಿ ರೂಪಾಯಿ ಭಂಡವಾಳವನ್ನು ಕೈಗಾರಿಕೆಗಳಲ್ಲಿ ಹಾಕಿದ್ದೇವೆ. ನನಗೆ ಆರ್ಥಿಕ ಮಂತ್ರಿಯಾಗಿ ಅತೀ ಮನಸ್ಸಿಗೆ ತೊಂದರೆ ಕೊಡತಕ್ಕ ವಿಚಾರವೆಂದರೆ, ನಾವು ರೂರಲ್ ಏರಿಯಾದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, ಏನು ಬಂಡವಾಳ ಹಾಕಿದ್ದೇವೆ, ಅದರಿಂದ ಕೂಡ ಪ್ರತಿಫಲ ಬರುತ್ತದೆ. ಆದರೆ ಕೈಗಾರಿಕೆಗಳಲ್ಲಿ ಸಿಕ್ಕುವ ಮೂರನೆ ಒಂದಂಶ ಕೂಡ ಸಿಗುತ್ತಿಲ್ಲ. ಇರಿಗೇಶನ್ ಮೇಲೆ 130 ಕೋಟಿ ರೂಪಾಯಿ ಭಂಡವಾಳ ಹಾಕಿದ್ದೇವೆ. ಇನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನು 100 ಕೋಟಿ ರೂಪಾಯಿ ಮೇಜರ್ ಮತ್ತು ಮೀಡಿಯಂ ಇರಿಗೇಷನಿಗೆ ಹಾಕಬೇಕೆಂದು ಕಾರ್ಯಕ್ರಮ ಇದೆ. ಇದರಿಂದ ಬರತಕ್ಕದ್ದೆಂದರೆ, ಲ್ಯಾಂಡ್ ರೆವೆನ್ಯೂ ಬಿಟ್ಟರೆ, ಕೇವಲ 50—60 ಲಕ್ಷ ರೂಪಾಯಿ ಮಾತ್ರ. ಇದು ನಿಜವಾಗಿಯೂ ಮನಸ್ಸಿಗೆ ಅಸಮಾಧಾನ ಮತ್ತು ಕಳವಳವನ್ನು ಉಂಟುಮಾಡ ತಕ್ಕ ವಿಚಾರ. ಇದರಲ್ಲಿ ನಾವು ರೈತರಿಗೆ 20—22 ಕೋಟಿ ರೂಪಾಯಿ ಸಾಲ ಕೊಡುತ್ತಿದ್ದೇವೆ, ಅದು ಸೇರಿಲ್ಲ ಇದರಲ್ಲಿ. ಇದರ ಹೊರತು ಸಹಕಾರ ಸಂಘಗಳಲ್ಲಿ ನಾವು ಹಾಕಿರತಕ್ಕದು, 10 ರಿಂದ 11 ಕೋಟಿ ರೂಪಾಯಿ. ಬೇರೆ ಬೇರೆ ಸಹಕಾರ ಸಂಘಗಳಲ್ಲಿ, ಸಹಕಾರ ಕಾರ್ಖಾನೆಗಳಲ್ಲಿ ಕೂಡ ಹಾಕಿದ್ದೇವೆ. ಅದರಿಂದ ಪ್ರತಿವರ್ಷ ಕೇವಲ 8 ಲಕ್ಷ ರೂಪಾಯಿ ಮಾತ್ರ ಬರುತ್ತದೆ.

5-00 P.M.

ಈಗ ಸರ್ಕಾರ ಒಂದು ತೀರ್ಮಾನಕ್ಕೆ ಬಂದಿದೆ. ಸಹಕಾರ ಸಂಘಗಳಲ್ಲಿ ಏನು ಒಂದು ಹಣ ವನ್ನು ತೊಡಗಿದಿಸಿದ್ದೇವೆ, ಕೆಲವು ವರ್ಷಗಳ ನಂತರ ವಾಪಸ್ ಪಡೆಯುವ ನಿರ್ಧಾರವನ್ನು ಸರ್ಕಾರ ಮಾಡಿದೆ. ಆ ವಿಚಾರವನ್ನು ಮಾನ್ಯ ಸದಸ್ಯರುಗಳಿಗೆ ತಿಳಿಸಲು ಇಚ್ಛೆಪಡುತ್ತೇನೆ. ಸಹಕಾರ ಸಂಘಗಳಿಗೆ ಸರ್ಕಾರದವರು ಷೇರ್ ಕ್ಯಾಪಿಟಲ್ ಆಗಿ ಕೊಡುವ ಹಣ ಏನಿದೆ ಅದು ಪ್ರಾರಂಭಿಕ ವಾಗಿ ಸಹಕಾರ ಸಂಘಗಳು ಚೇತರಿಸಿಕೊಳ್ಳಬೇಕು, ಬೆಳೆಯಬೇಕೆಂಬ ದೃಷ್ಟಿಯಿಂದ ಸಹಕಾರ ಸಂಘಗಳು ಸತತವಾಗಿ ಸರ್ಕಾರದ ಹಣದಿಂದಲೇ ವ್ಯಾಪಾರ ಮಾಡಬೇಕೆಂದಲ್ಲ. ಆದ್ದರಿಂದ ಪ್ರತಿಯೊಂದು ಸಹಕಾರ ಸಂಸ್ಥೆಗಳನ್ನು ಪರಿಶೀಲನೆಮಾಡಿ, ಅವುಗಳಲ್ಲಿ ಎಷ್ಟರಮಟ್ಟಿಗೆ, ಎಷ್ಟರ ವರೆಗೆ ಹಣವಿಡುವುದು ಸಾಧ್ಯವೋ ಅಷ್ಟರವರೆಗೆ ಇಟ್ಟು, ಅಗತ್ಯವಿಲ್ಲದಾಗ ಆ ಹಣವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ.

ಇನ್ನು ಗ್ರಾಮಾಭಿವೃದ್ಧಿ ಬಗ್ಗೆ ಅದರಲ್ಲೂ ಮುಖ್ಯವಾಗಿ ವ್ಯವಸಾಯಾಭಿವೃದ್ಧಿಯ ಬಗ್ಗೆ ನೀರಾ ವರಿಯ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, ಆ ಬಾಬುಗಳಿಂದ ಸರ್ಕಾರಕ್ಕೆ ತಕ್ಕಷ್ಟು ಉತ್ಪಾದನೆ ಬರುತ್ತಿಲ್ಲ. ಅಂದರೆ ಸರ್ಕಾರ ವ್ಯಾಪಾರಸ್ಥರಂತೆ ವ್ಯಾಪಾರ ಮಾಡುವುದಕ್ಕೆ ಹೊರಟಿಲ್ಲ. ಈ ಬಾಬು ಗಳಿಗೆ ಪ್ರತಿ ವರ್ಷ ಕೋಟ್ಯಾಂತರ ರೂಪಾಯಿಗಳನ್ನು ಬಂಡವಾಳವಾಗಿ ಹಾಕುತ್ತೇವೆ. ಹಾಕುವ ಬಂಡವಾಳಕ್ಕೆ ಪ್ರತಿವರ್ಷ ಬರುವ ಪ್ರತಿಫಲ ಏನೆಂಬುದನ್ನು ನೋಡುವುದು ನಮ್ಮ ಕರ್ತವ್ಯ. ನಮ್ಮ ಮೈಸೂರು ರಾಜ್ಯದಲ್ಲಿ ಪ್ರತಿ ವರ್ಷ ಬೆಳೆಯುವ ಹತ್ತಿ, ಬತ್ತ, ರಾಗಿ ಮುಂತಾದ ಎಲ್ಲಾ ಬೆಳೆಗಳ ಒಟ್ಟು ಕಿಮ್ಮತ್ತು 560 ಕೋಟಿ ರೂಪಾಯಿಗಳಾಗುತ್ತದೆ. ಈ 550 ಕೋಟಿ ರೂಪಾಯಿಗಳಿಗೆ 10 ಪರ್‌ಸೆಂಟ್‌ನಂತೆ ಬೇಡ, 5 ಪರ್‌ಸೆಂಟಿನಂತೆ ಆದರೂ ಸರ್ಕಾರಕ್ಕೆ 25 ಕೋಟಿ ರೂಪಾಯಿಗಳ ಆದಾಯ ಬರಬೇಕು. ಆದರೆ ಸರ್ಕಾರಕ್ಕೆ ಬರುತ್ತಿರುವುದು ರೆವೆನ್ಯೂ ಬಾಬಿನಿಂದ ನಾಲ್ಕೂವರೆ ಕೋಟಿ ರೂಪಾಯಿಗಳು, ಬೆಟರ್‌ಮೆಂಟ್ ಲೆವಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಮುಂತಾದುವ ನ್ನೆಲ್ಲಾ ಸೇರಿಸಿ ಒಟ್ಟು 6-7 ಕೋಟಿ ರೂಪಾಯಿಗಳಷ್ಟು ಮಾತ್ರ ಆದಾಯ ಸರ್ಕಾರಕ್ಕೆ ಬರುತ್ತದೆ. ನಾವು ಅರ್ಬನ್ ಏರಿಯಾದಲ್ಲಿ ಇನ್‌ಕಮ್ ಮೇಲೆ ಯಾವ ರೀತಿ ಟ್ಯಾಕ್ಸ್ ಹಾಕಿದ್ದೇವೋ, ಅದೇ ರೀತಿಯಲ್ಲಿ ರೂರಲ್ ಏರಿಯಾದ ಮೇಲೆ ಇನ್‌ಕಮ್‌ಗೆ ತಕ್ಕ ಟ್ಯಾಕ್ಸ್ ಹಾಕಿಲ್ಲ. ನೆನ್ನೆ ನಮ್ಮ ಮುಖ್ಯ ಮಂತ್ರಿಗಳು ಹೇಳಿದಂತೆ ರೈತನು ಇವತ್ತಿನದಿವಸ ಒಂದು ಎಕರೆಗೆ ಮೊದಲು 200 ರೂಪಾಯಿಗಳ

ಇನ್‌ಕಮ್ ಪಡೆಯುತ್ತಿದ್ದರೆ ಈಗ 2 ಸಾವಿರದಿಂದ 3 ಸಾವಿರದವರೆಗೆ ಇನ್‌ಕಂ ಪಡೆಯುತ್ತಿದ್ದಾನೆ. ಇದಕ್ಕೆ ಕಾರಣ ಸರ್ಕಾರದವರು ನೀರಾವರಿ ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸಿರುವುದು. ಈಗ ರೈತನು ಎಕರೆಗೆ 2 ಸಾವಿರದಿಂದ 3 ಸಾವಿರದವರೆಗೆ ವರಮಾನ ಪಡೆಯುತ್ತಿದ್ದಾನೆ ಆ ಹಣವನ್ನು ಮಾಪ್ ಅಪ್ ಮಾಡದಿದ್ದರೆ ಮುಂದೆ ದೇಶದ ಹಿತದೃಷ್ಟಿಯಿಂದ ತೊಂದರೆಯಾಗುತ್ತದೆ. ರೈತರು ಒಳ್ಳೆಯ ಜೀವನ ಮಾಡಕೂಡದು ಎಂದು ಹೇಳುವುದಿಲ್ಲ. ಕೈಯ್ಯಲ್ಲಿ ಹೆಚ್ಚು ಹಣ ಬಂದರೆ, ಒಬ್ಬ ಮನುಷ್ಯ ಬಹಳ ವರ್ಷದಿಂದ ಬಡತನದಿಂದ ಜೀವನ ಮಾಡಿ, ಸ್ವಲ್ಪ ಕಾಲದ ನಂತರ ಆತನ ಕೈಗೆ ಸ್ವಲ್ಪ ಹೆಚ್ಚು ಹಣ ಬಂದರೆ, ಆತನಿಗೆ ಚೆನ್ನಾಗಿ ಖರ್ಚು ಮಾಡುವ ಲವಲವಿಕೆ ಬರುತ್ತದೆ. ಆ ರೀತಿ ಖರ್ಚು ಮಾಡುವುದನ್ನು ತಡೆಹಿಡಿಯಬೇಕಾಗುತ್ತದೆ. ಅದು ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ಒಳ್ಳೆಯದು. ಈ ವಿಚಾರವನ್ನು ಹಿಂದೆ ಒಂದು ಸಲ ಪ್ರಸ್ತಾಪ ಮಾಡಿದ್ದೇನೆ. ರೂರಲ್ ಇನ್‌ಕಮ್ ಮೇಲೆ ಇನ್ನೂ ಸ್ವಲ್ಪಮಟ್ಟಿಗೆ ಟ್ಯಾಕ್ಸ್ ಹಾಕುವುದು ಒಳ್ಳೆಯದೆಂದು ಕಾಣುತ್ತದೆ. ಅದನ್ನು ಸರ್ಕಾರ ಯೋಚನೆ ಮಾಡುತ್ತಿದೆ. ನಾನು ಮುಖ್ಯವಾದ ವಿಚಾರಗಳನ್ನು ಹೇಳಿದ್ದೇನೆ. ಇನ್ನು ಹೆಚ್ಚು ಹೇಳುವ ಅಗತ್ಯವಿಲ್ಲವೆಂದು ಕಾಣುತ್ತದೆ. ಮಿತವ್ಯಯದ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಸೂಚನೆ ಮಾಡಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ಇದು ಮೊದಲನೆಯ ಹೆಜ್ಜೆಯಾಗಿದೆ, ಕೊನೆಯ ಹೆಜ್ಜೆಯಲ್ಲ. ಯಾವ ಯಾವ ಕರ್ತವ್ಯವನ್ನು ಯಾವ ರೀತಿ ಮಾಡಬೇಕೋ ಅದನ್ನು ಮಾಡುತ್ತೇವೆ. ಶ್ರೀ ಶರಣಗೌಡರು ಬೇಡಿಕೆಗೆ ಸಂಬಂಧಪಡದ ವಿಚಾರವನ್ನು ಹೇಳಿದರು. ಅದಕ್ಕೆ ಉತ್ತರ ಕೊಡುವುದು ಸರಿಯಲ್ಲ. ಏಕ ಸದಸ್ಯ ಆಯೋಗದ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಅದರಿಂದ ನಮಗೆ ಅನುಕೂಲವಾಗುತ್ತದೆಂಬ ನಂಬಿಕೆಯಿದೆ. ನಮ್ಮ ಸದಸ್ಯರುಗಳು ಹೇಳಿದ ವಿಚಾರಗಳನ್ನು, ಸಲಹೆಗಳನ್ನು ಸ್ವೀಕಾರ ಮಾಡಿ ಅದರಂತೆ ನಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಈ ಅಪ್ರೊಪ್ರಿಯೇಷನ್ ಬಿಲ್ಲಿಗೆ ತಾವೆಲ್ಲರೂ ಒಮ್ಮತದ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ರಾಜ್ಯಾಂಗದತ್ತವಾದ ಸರ್ಕಾರಿ ನೌಕರರುಗಳಿಗೆ ಏನು ಒಂದು ಹಕ್ಕುಗಳು 1950ನೇ ಇಸವಿಯಿಂದ ಬಂದಿವೆ, ಅವುಗಳನ್ನು ಮೀರಿ ಅಂದರೆ ಸರ್ಕಾರಿ ಅಧಿಕಾರಿಗಳು ಅಪ್ರಮಾಣಿಕತೆಯಿಂದ ಅದಕ್ಷತೆಯಿಂದ ಮತ್ತು ಅಲಕ್ಷ್ಯತೆಯಿಂದ ಕೆಲಸ ಮಾಡಿದರೆ ಅವರ ಮೇಲೆ ಒಂದು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಆ ವಿಚಾರದಲ್ಲಿ ಇಷ್ಟು ನಿಧಾನವಾಗಿ ಏತಕ್ಕೆ ಯೋಚನೆ ಮಾಡಿದಿರಿ. ಇದಕ್ಕಿಂತ ಹಿಂದೆ ಅಪ್ರಾಮಾಣಿಕರಾದ ಅದಕ್ಷರಾದ ಅಧಿಕಾರಿಗಳು ಇರಲಿಲ್ಲವೆ? ಈಗ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದು ತಮ್ಮ ಒಂದು ಅದಕ್ಷತೆಯನ್ನು ತೋರಿಸುವುದಿಲ್ಲವೆ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಅಲಕ್ಷತೆಯ ಪ್ರಶ್ನೆ ಬರುವುದಿಲ್ಲ. ಹೆಜ್ಜೆ ಹೆಜ್ಜೆಗೂ ಕ್ಲಿಷ್ಟವಾದ ಸಮಸ್ಯೆಗಳು ಅದಕ್ಷ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವಾಗ ಬರುತ್ತವೆ. ಅದು ನಾವು ಮಾತನಾಡುವಾಗ ಹೇಳುವಷ್ಟು ಸುಲಭವಾದುದಲ್ಲ. ಮಾನ್ಯ ಸದಸ್ಯರು ನಮ್ಮ ಕಡೆ ಇದ್ದವರು ಬಿಟ್ಟು ಆ ಕಡೆ ಹೋದರು. ಅವರು ಈ ಕಡೆಯೇ ಇದ್ದಿದ್ದರೆ ಅವರಿಗೆ ಒಂದು ಅವಕಾಶ ಸಿಗುತ್ತಿತ್ತು. ಆಗ ಅವರಿಗೆ ಅದರ ಅನುಭವ ಗೊತ್ತಾಗುತ್ತಿತ್ತು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ರೂರಲ್ ಏರಿಯಾದಲ್ಲಿರುವವರಿಗೆ ಒಂದು ಎಕರೆಗೆ 2 ರಿಂದ 3 ಸಾವಿರದವರೆಗೆ ಆದಾಯ ಬರುತ್ತಿದೆಯೆಂದು ಹೇಳಿದಿರಿ. ನಮ್ಮ ರಾಜ್ಯದಲ್ಲಿ 5 ಎಕರೆ ಭೂಮಿ ಇರುವವರೇ ಜಾಸ್ತಿ. ಅವರು ತಮಗಾಗುವಷ್ಟು ಆಹಾರವನ್ನು ಬೆಳೆದುಕೊಂಡು ಜೀವನ ಮಾಡುತ್ತಿರುತ್ತಾರೆ. ಪಲ್ಲಾರಾಗಿ ಆಗ 6ರೂಪಾಯಿ ಇತ್ತು, ಈಗ 60 ರೂಪಾಯಿಗಳಾಗಿದೆ. ಬಟ್ಟೆಗಳ ಬೆಲೆ ಜಾಸ್ತಿಯಾಗಿದೆ. ಸೀಮೆಎಣ್ಣೆ ಆಗ ಸೀಸೆಗೆ ಎರಡಾಣೆ ಇತ್ತು, ಈಗ 12 ಆಣೆ ಆಗಿದೆ. ಆದಾಯಕ್ಕೆ ತಕ್ಕ ಖರ್ಚು ಇರುವಾಗ ಅವರ ಮೇಲೆ ಇನ್ನೂ ಹೆಚ್ಚಿನ ಟ್ಯಾಕ್ಸ್ ಹಾಕುತ್ತೇವೆಂದು ಹೇಳುವುದು ಸರಿಯಲ್ಲ, ಅದನ್ನು ವಿಚಾರ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ರಾಜ್ಯದಲ್ಲಿ ವರ್ಷಕ್ಕೆ 500 ರಿಂದ 550 ಕೋಟಿ ರೂಪಾಯಿಗಳ ಬೆಲೆಯಷ್ಟು ಆಹಾರಧಾನ್ಯವನ್ನು ಬೆಳೆಯುತ್ತಾರೆ. ಆ ಹಣಕ್ಕೆ 10 ಪರ್‌ಸೆಂಟ್‌ನಂತೆ ಟ್ಯಾಕ್ಸ್ ಹಾಕಬೇಕೆಂದು ಹೇಳಲಿಲ್ಲ. ಕೆಲವು ಭಾಗಗಳಲ್ಲಿ ಹೊಸ ಅನುಕೂಲಗಳನ್ನು ರೈತರಿಗೆ ಒದಗಿಸಿರುವುದರಿಂದ ಅವರಿಗೆ ವರಮಾನ ಜಾಸ್ತಿಯಾಗುವುದಕ್ಕೆ ಅವಕಾಶವಾಗಿದೆ. ಆ ಹೆಚ್ಚಿನ ವರಮಾನದಲ್ಲಿ ಮಾಪ್ ಅಪ್ ಮಾಡದಿದ್ದರೆ ಮುಂದೆ ಅದರಿಂದ ದೇಶದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ಸೇಲ್ಸ್ ಟ್ಯಾಕ್ಸ್‌ನಲ್ಲಿ ಪ್ರಾವಿಷನಲ್ ಅಸೆಸ್‌ಮೆಂಟ್ ಎಂದು ಮಾಡಿರುವುದರಿಂದ ವ್ಯಾಪಾರಸ್ಥರಿಗೆ ಕೆಲವು ಸಾರಿ ತೊಂದರೆಯಾಗುತ್ತದೆ. ಕೆಲವು ವ್ಯಾಪಾರಸ್ಥರು ಖಾಯಿಲೆಯಿರುತ್ತಾರೆ, ಮತ್ತೆ ಕೆಲವರು 6 ತಿಂಗಳು ಅಂಗಡಿಯನ್ನೇ ತೆರೆಯುವುದಿಲ್ಲ. ಅಂಥವರನ್ನು ಕೋರ್ಟಿಗೆ ತಿರುಗಿಸಿ ತಿರುಗಿಸಿ ತಪ್ಪಿಲ್ಲದಿದ್ದರೂ ಜೈಲಿಗೆ ಕಳಿಸುವ ಸಂದರ್ಭಗಳು ಬಂದಿವೆ. ಆದ್ದರಿಂದ ಈ ರೀತಿ ಮಾಡಿರುವುದು ಸರಿಯಲ್ಲ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ರೂಲ್ಸನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೂ ಕಷ್ಟ, ತರದಿದ್ದರೂ ಕಷ್ಟ.

ಶ್ರೀ ಎಸ್.ಪಿ. ಅಗ್ನಿಹೋತ್ರಿ (ಧಾರವಾಡ ರೂರಲ್).—ಹುಬ್ಬಳ್ಳಿ ಮಿಲ್ಸ್ ಮತ್ತು ಗುಲ್ಬರ್ಗದ ಎಂ. ಎಸ್. ಕೆ. ಮಿಲ್‌ಗಳು ಲುಕ್ಸಾನದಿಂದ ನಡೆಯುತ್ತಿದೆಯೆಂದು ಹೇಳಿದಿರಿ. ಆ ಮಿಲ್‌ಗಳನ್ನು ಖಾಸಗಿಯವರು ನಡೆಸುವುದಕ್ಕೆ ಅನುಮತಿ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಈಗಲೇ ಉತ್ತರ ಹೇಳುವುದಿಲ್ಲ. ಸಂದರ್ಭ ಬಂದಾಗ ಉತ್ತರ ಹೇಳುತ್ತೇನೆ.

Sri DIGAMBAR RAO BALWANT RAO.—You have now closed the M. S. K. Mills, Gulbarga. What are you going to do with the machinery that was purchased for these Mills worth Rs. 30 lakhs ?

Sri RAMAKRISHNA HEGDE.—Government has nothing to do with that. It is for the Board of Directors to take proper decision at the appropriate time.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಸರಕಾರ ನಡೆಸುತ್ತಿರುವ ಕೈಗಾರಿಕೆಗಳು ತೃಪ್ತಿಕರವಾಗಿ ಕೆಲಸಮಾಡುತ್ತಿಲ್ಲವೆಂದು ಹೇಳುತ್ತಾರೆ, ಅದಕ್ಕೆ ಒಂದು ಸೂಚನೆ ಕೊಡುತ್ತೇನೆ. ಕೆಲವರು ಐ. ಎ. ಎಸ್. ಆಫೀಸರುಗಳು ಕೆಲವು ಕೈಗಾರಿಕೆಗಳಲ್ಲಿ ಬಹಳ ದಿನಗಳಿಂದ ಇದ್ದು ಬೆಂಗಳೂರಿನಲ್ಲೇ ವಾಸಮಾಡಿಕೊಂಡು ಖಯೀಮರಾಗಿದ್ದಾರೆ, ಅದರಿಂದ ನಷ್ಟವಾಗುತ್ತಿದೆ. ಬೇಕಾದರೆ ರಹಸ್ಯವಾಗಿ ಸಲಹೆಕೊಡಲು ತಯಾರಾಗಿದ್ದೇನೆ. ಕೆಲವರು ಕಲ್ಕತ್ತ, ದೆಹಲಿ ಮುಂತಾದ ಕಡೆಗಳಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ. ಅವರನ್ನು ತೆಗೆದರೆ ಒಳ್ಳೆಯದಾಗುವುದು.

ಶ್ರೀ ರಾಮಕೃಷ್ಣ ಹೆಗಡೆ.—ತಾವೊಂದು ಸೂಚನೆ ಮಾಡಿದ್ದೀರಿ, ಅದನ್ನು ಸರಕಾರ ಅವಶ್ಯವಾಗಿ ಪರಿಶೀಲಿಸುವುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಳ್ಳಿಗಾಡಿನಲ್ಲಿ ಇತ್ತೀಚೆಗೆ ಐಶ್ವರ್ಯವಂತರಾಗಿರುವವರ ಮೇಲೆ ಹೆಚ್ಚು ಹೊರೆ ಹೊರಿಸಬೇಕೆಂದಿದ್ದಾರೆ. ಅದಕ್ಕೆ ಮುಂಚೆ ನೀರಾವರಿ ಅನುಕೂಲ ಮೊದಲು ಮಾಡಿರುವ ಕಡೆ ಸುಮಾರು 10 ಕೋಟಿಯವರೆಗೆ ಸೌಕರ್ಯ ಮಾಡಿರುವ ಕಡೆ ಯಾವರೀತಿ ಐಶ್ವರ್ಯ ಬೆಳೆದಿದೆ, ಜೀವನಮಟ್ಟ ಹೆಚ್ಚಿದೆಯೇ ಎಂದು ನೋಡಿ ಅವರಿಗೂ ಹೊರೆ ಹೊರಿಸಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ತಿಳಿದುಕೊಂಡು ಮಾಡುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಶಾಖಾಯ ಲವಣಾಯ ಮಾಡುವವರಿಗೆ ತಕ್ಕ ಶಿಕ್ಷೆ ವಿಧಿಸಲು ಕಾನೂನನ್ನು ತಿದ್ದುಪಡಿಮಾಡಲು ಅವಕಾಶವಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ರಾಜ್ಯಾಂಗದಲ್ಲಿ ಬದಲಾವಣೆ ಮಾಡಬೇಕಾದ್ದು ಅಗತ್ಯವೆಂದು ಕೇಂದ್ರ ಸರಕಾರಕ್ಕೆ ಮನವರಿಕೆಯಾಗಿದೆ.

ಶ್ರೀ ಎ. ಆರ್. ಬದರಿನಾರಾಯಣ್.—ಪಬ್ಲಿಕ್ ಸೆಕ್ಟಾರಿನಲ್ಲಿ ಕೈಗಾರಿಕೆಗಳಿಂದ ಬರಬೇಕಾದಷ್ಟು ಆದಾಯ ಬರುತ್ತಿಲ್ಲ. ಅದಕ್ಕೇನು ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಅನೇಕ ಕ್ರಮ ಸರಕಾರ ಕೈಗೊಂಡಿದೆ.

ಶ್ರೀ ಎಸ್. ಎಸ್. ಅರಕೇರಿ.—ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ನಷ್ಟವಾಗಿ ಈಗ ಅದನ್ನು ಮುಚ್ಚುವ ಸಂಭವವಿದೆ, ಅದಕ್ಕೆ ದುರಾಡಳಿತ ಕಾರಣವಲ್ಲವೇ ? ಮಳೆಯಿಲ್ಲದಿದ್ದರೂ ಪಾಂಡವಪುರದಲ್ಲಿ ಏಕೆ ತೊಂದರೆಯಾಗಲಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಲಿಕ್ವಿಡೇಟ್ ಆಗುವ ಸಂಭವವಿಲ್ಲ. ಕಳೆದ ಎರಡು ವರ್ಷ ನೀರಿಲ್ಲದೆ ಕಬ್ಬಿನ ಬೆಳೆಯಾಗಲಿಲ್ಲ, ನವೆಂಬರಿನಲ್ಲಿ ಕಬ್ಬು ಬರುವುದರಿಂದ ಪುನಃ ಕಾರ್ಖಾನೆ ಕೆಲಸ ನಡೆಯುತ್ತದೆ, ಕಬ್ಬಿಲ್ಲದೆ ನಡೆಯಲಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅಧಿಕಾರಿಗಳ ಅದ್ಯಕ್ಷತೆ ಮತ್ತು ಅಪ್ರಾಮಾಣಿಕತೆ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿ ವರ್ಷ ಎಷ್ಟೋ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಕಾನೂನಿನಲ್ಲಿರುವ ತೊಂದರೆಯನ್ನು ಮುಖ್ಯ ಮಂತ್ರಿಗಳು ಹೇಳಿದರು.

ಶ್ರೀಮತಿ ಕೆ. ಲೀಲಾವತಿ ರೈ (ಬಂಟವಾಳ್).—ಗ್ರಾಮಾಂತರ ಪ್ರದೇಶಗಳಲ್ಲಿ ಉತ್ಪತ್ತಿ ಜಾಸ್ತಿ ಇರುವವರು ಹೊರೆ ಹೊರಬೇಕೆಂದು ಮಾನ್ಯ ಮಂತ್ರಿಗಳು ಹೇಳಿದರು. ಪಟ್ಟಣಗಳಲ್ಲೂ ಲಾಯರುಗಳು, ಡಾಕ್ಟರುಗಳು ಮುಂತಾದವರು ಉತ್ಪತ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದೆಯೇ ?

(*Laughter*)

Mr. SPEAKER.—The question is :

"That the Mysore Appropriation (No. 2) Bill, 1967 be taken into consideration."

The motion was adopted.

CLAUSES, etc.

Mr. SPEAKER.—The question is :

"That clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—The question is :

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—The question is :

"That Clause 1, the Title and the Preamble stand part of the Bill."

The motion was adopted.

The Clause 1, the Title and the Preamble were added to the Bill.

Motion to pass.

Sri RAMAKRISHNA HEGDE.—Sir, I beg to move :

"That the Mysore Appropriation (No. 2) Bill, 1967, be passed."

Mr. SPEAKER.—The question is :

"That the Mysore Appropriation (No. 2) Bill, 1967, be passed."

The motion was adopted.

Mr. SPEAKER.—The House stands adjourned and will meet tomorrow at 8-30 A.M.

The House adjourned at Twenty Minutes past Five of the Clock to meet again at Thirty Minutes past Eight of the Clock on Saturday the 29th July 1967.